# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:08.05.2026

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007**

**ದೂರವಾಣಿ ಸಂಖ್ಯೆ :08192–208029** **ಇ–ಮೇಲ್:registrar@davangereuniversity.ac.in**


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/07/2026–27/833** **ದಿನಾಂಕ:14.05.2026**

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ : ದಿನಾಂಕ:08.05.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:08.05.2026 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

**<u>ಪ್ರತಿಗಳು:</u>**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಪ್ರಾಧಿಕಾರ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಹಣಕಾಸು/ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:08.05.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಬಿ. ಎನ್. ಉಮೇಶ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಶ್ರೀ ಭರಮಗೌಡ ಪಾಟೀಲ., ಪ್ರಾಚಾರ್ಯರು : ಸದಸ್ಯರು
6. ಡಾ. ಜೋಮನ್ ಕೆ.ಜಿ. ಪ್ರಾಚಾರ್ಯರು : ಸದಸ್ಯರು
7. ಶ್ರೀ ತಿಪ್ಪೇಶ್ ಜಿ.ಆರ್., ಪ್ರಾಚಾರ್ಯರು : ಸದಸ್ಯರು
8. ಡಾ. ಎ.ಜೆ. ನೀತಾ, ಪ್ರಾಚಾರ್ಯರು : ಸದಸ್ಯರು
9. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
10. ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಡಾ. ಜಿ.ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಶ್ರೀ. ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
13. ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
14. ಪ್ರೊ. ಮಮತ ಜಿ.ಪಿ., ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ : ಸದಸ್ಯರು
15. ಪ್ರೊ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
16. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಸೂಪರ್ ಟೈಂ ಸ್ಕೇಲ್) ಕುಲಸಚಿವರು (ಆಡಳಿತ) : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 16 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(05/26) |

# –:ಟಿಪ್ಪಣಿ:–

**ವಿಷಯ: ದಿನಾಂಕ:12.03.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:12.03.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:26.03.2026 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಇದುವರೆಗೂ ಸದರಿ ನಡಾವಳಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ದಿನಾಂಕಃ12.03.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳ ಕುರಿತು

1. ವಿಷಯ ಸಂಖ್ಯೆ:02(m) 03/26 – ಶ್ರೀ ವಿನಯ್ ಕೆ.ಜಿ. ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ 1) ಶ್ರೀಮತಿ ಶಾರದಾ ಪಾಟೀಲ, 2) ಡಾ. ಜಿ.ಕೆ. ಪ್ರೇಮ ಹಾಗೂ 3) ಶ್ರೀ ತಿಪ್ಪೇಸ್ವಾಮಿ ಹೆಚ್ ಹಾಗೂ ಇನ್ನಿತರೆ ಕೆಲವು ಸದಸ್ಯರುಗಳು – ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕೇತರ ಸಿಬ್ಬಂದಿಗಳ ಕೊರತೆ ಇರುವುದರಿಂದ ಸದರಿಯವರನ್ನು ಹುದ್ದೆ ರಹಿತವಾಗಿ ವರ್ಗಾವಣೆ ಮಾಡಲು ದಿನಾಂಕ:12.03.2026 ರ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯವನ್ನು ಹಿಂಪಡೆಯುವಂತೆ ಆಕ್ಷೇಪಣೆ ವ್ಯಕ್ತಪಡಿಸಿದರು. ಆದರೆ, ಈಗಾಗಲೇ ಕ್ರಮಕೈಗೊಂಡು ಸರ್ಕಾರಕ್ಕೆ ಪತ್ರಿಸಲಾಗಿದ್ದು ಪ್ರತಿಯನ್ನು ಗೌರವಾನ್ವಿತ ಕುಲಾಧಿಪತಿಗಳಿಗೆ ಪತ್ರ ಬರೆಯಲಾಗಿದೆಯೆಂದು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.
2. ವಿಷಯ ಸಂಖ್ಯೆ:04(d) 03/26 – ಡಿಜಿಟಲ್ ಶಿಕ್ಷಣ ವ್ಯವಸ್ಥೆಗಳ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನಗೊಳಿಸುವ ಪ್ರಸ್ತಾವನೆ ಕುರಿತಂತೆ ವಿಶ್ವವಿದ್ಯಾನಿಲಯದಿಂದ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಸದರಿ ವಿಷಯದ ಕುರಿತು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂಬ ಅಂಶವನ್ನು ಸಭೆಗೆ ತಿಳಿಸಿದರು.

ಉಳಿದಂತೆ, ಇತರೆ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(05/26) |

## –ಃಟಿಪ್ಪಣಿಃ–

**ವಿಷಯಃ ದಿನಾಂಕ:12.03.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ದೃಢೀಕರಣ ಕುರಿತು.**

*****

ದಿನಾಂಕ:12.03.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಸಿದ್ಧಪಡಿಸಲಾಗಿದ್ದು, ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕಃ12.03.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ಅನುಪಾಲನಾ ವರದಿಯ ಕುರಿತು

1. ವಿಷಯ ಸಂಖ್ಯೆ:02(m) 03/26 ಶ್ರೀ ವಿನಯ್ ಕೆ.ಜಿ. ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ 1) ಶ್ರೀಮತಿ ಶಾರದಾ ಪಾಟೀಲ, 2) ಡಾ. ಜಿ.ಕೆ. ಪ್ರೇಮ ಹಾಗೂ 3) ಶ್ರೀ ತಿಪ್ಪೇಸ್ವಾಮಿ ಹೆಚ್ ಹಾಗೂ ಇನ್ನಿತರೆ ಕೆಲವು ಸದಸ್ಯರುಗಳು – ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕೇತರ ಸಿಬ್ಬಂದಿಗಳ ಕೊರತೆ ಇರುವುದರಿಂದ ಸದರಿಯವರನ್ನು ಹುದ್ದೆ ರಹಿತವಾಗಿ ವರ್ಗಾವಣೆ ಮಾಡಲು ದಿನಾಂಕ:12.03.2026 ರ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯವನ್ನು ಹಿಂಪಡೆಯುವಂತೆ ಆಕ್ಷೇಪಣೆ ವ್ಯಕ್ತಪಡಿಸಿದರು. ಆದರೆ, ಈಗಾಗಲೇ ಕ್ರಮಕೈಗೊಂಡು ಸರ್ಕಾರಕ್ಕೆ ಪತ್ರಿಸಲಾಗಿದ್ದು ಪ್ರತಿಯನ್ನು ಗೌರವಾನ್ವಿತ ಕುಲಾಧಿಪತಿಗಳಿಗೆ ಪತ್ರ ಬರೆಯಲಾಗಿದೆಯೆಂದು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.
2. ವಿಷಯ ಸಂಖ್ಯೆ:04(d) 03/26 – ಡಿಜಿಟಲ್ ಶಿಕ್ಷಣ ವ್ಯವಸ್ಥೆಗಳ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನಗೊಳಿಸುವ ಪ್ರಸ್ತಾವನೆ ಕುರಿತಂತೆ ವಿಶ್ವವಿದ್ಯಾನಿಲಯದಿಂದ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಸದರಿ ವಿಷಯದ ಕುರಿತು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂಬ ಅಂಶವನ್ನು ಸಭೆಗೆ ತಿಳಿಸಿದರು.

ಉಳಿದಂತೆ, ಇತರೆ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 3 | |
| --- | --- |
| ವಿಷಯ ಸಂಖ್ಯೆ: | ಸಿಂ.02(a)/(05/26) |

## –ಃಟಿಪ್ಪಣಿಃ–

**ವಿಷಯಃ ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾ.ವಿ.ವಿ. ಇವರು Post Doctrol Fellowhip ಗೆ ಅರ್ಜಿ ಸಲ್ಲಿಸಲು ಅನುಮತಿ ಕೋರಿರುವ ಬಗ್ಗೆ.**

ಉಲ್ಲೇಖ: ದಿನಾಂಕಃ12.03.2026ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.

*****

ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ಮಂಗಳೂರಿನ Yenepoya Research Center (YRC) ನಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧನೆ ನಡೆಸಲು ಯು.ಜಿ.ಸಿ. ಯ ವ್ಯಾಸಂಗ ರಜೆ (02 ವರ್ಷಗಳ ಅವಧಿ) ನಿಯಮದಡಿ Post Doctrol Fellowhip ಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಕುರಿತು ದಿನಾಂಕಃ12.03.2026ರಂದು ಏರ್ಪಡಿಸಲಾದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿತ್ತು. ಸದರಿ ಸಿಂಡಿಕೇಟ್ ಸಭೆಯು ವಿಷಯವನ್ನು ಮುಂದೂಡಲು ನಿರ್ಣಯಿಸಿರುತ್ತದೆ.

ತತ್ಸಂಬಂಧ, ಡಾ. ಮಾನಸ ಡಿ.ಜೆ, ಸಹಾಯಕ ಪ್ರಧ್ಯಾಪಕರು ಇವರಿಗೆ Post Doctrol Fellowhip ಗೆ ಅರ್ಜಿ ಸಲ್ಲಿಸಲು ಹಾಗೂ PDF ಮಾಡಲು ಅನುಮತಿ ನೀಡುವ ಕುರಿತು ದಿನಾಂಕಃ08.05.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಪುನಃ ವಿಷಯ ಮಂಡಿಸಲಾಗಿದೆ.

:: ನಿರ್ಣಯ ::

ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ಮಂಗಳೂರಿನ Yenepoya Research Center (YRC) ನಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧನೆ ನಡೆಸಲು ಯು.ಜಿ.ಸಿ. ನಿಯಮಾವಳಿಗಳನುಸಾರ ವ್ಯಾಸಂಗ ರಜೆ ಮಂಜೂರು ಮಾಡಿ (02 ವರ್ಷಗಳ ಅವಧಿ) Post Doctrol Fellowhip ಗೆ ಅರ್ಜಿ ಸಲ್ಲಿಸಲು ಹಾಗೂ PDF ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(05/26) |

## –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿ ಅಲ್ಪಸಂಖ್ಯಾತರಿಗಾಗಿ "ವಿಶೇಷಕೋಶ" ಸ್ಥಾಪನೆ ರಚಿಸಿರುವ ಕುರಿತು.**

ಉಲ್ಲೇಖ:
1. ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆಃ ಕರಾಅಆ/ಸಿಆರ್–139/ಪಿಜಿಆರ್/2025–26/08, ದಿನಾಂಕಃ 07.04.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 18.04.2026

*****

ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು – ಇವರು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ತಡೆಗಟ್ಟುವ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸದಸ್ಯರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ವಿಶೇಷಕೋಶವನ್ನು ರಚಿಸಿ ಆಯೋಗಕ್ಕೆ ವರದಿ ನೀಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ನಿರ್ದೇಶಿಸಿರುತ್ತಾರೆ.

ಈ ಕುರಿತು ವಿಶ್ವವಿದ್ಯಾನಿಲಯದಲ್ಲಿ "ವಿಶೇಷ ಕೋಶವನ್ನು" ರಚಿಸುವ ಸಂಬಂಧ ದಿನಾಂಕಃ08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು ಇವರ ಆದೇಶಾನುಸಾರ – ವಿಶ್ವವಿದ್ಯಾನಿಲಯದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ತಡೆಗಟ್ಟುವ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸದಸ್ಯರನ್ನೊಳಗೊಂಡಂತೆ ವಿಶೇಷ ಕೋಶವನ್ನು ರಚಿಸಿ ಆಯೋಗಕ್ಕೆ ವರದಿ ನೀಡುವಂತೆ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(05/26) |

## –:ಟಿಪ್ಪಣಿ:–

**ವಿಷಯಃ ಡಾ. ರಾಜೇಂದ್ರ ಪ್ರಸಾದ್ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇವರು – ತಮ್ಮನ್ನು ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರಕ್ಕೆ ವಿಶೇಷಾಧಿಕಾರಿಯಾಗಿ ನೇಮಿಸುವಂತೆ ಕೋರಿರುವ ಕುರಿತು.**

ಉಲ್ಲೇಖಃ
1. ಡಾ. ರಾಜೇಂದ್ರ ಪ್ರಸಾದ್ ಎಸ್., ಸಹಾಯಕ ಪ್ರಾಧ್ಯಾಪಕರು ಇವರ ಮನವಿ ಪತ್ರ ಸ್ವೀಕೃತ ದಿನಾಂಕಃ 04.04.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ18.04.2026

*****

ಡಾ. ರಾಜೇಂದ್ರ ಪ್ರಸಾದ್ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದ ಸುಧಾರಣೆ ಮಾಡಲು, ಪ್ರವೇಶಾತಿಗಳನ್ನು ಹೆಚ್ಚಿಸಲು ಹಾಗೂ ವಸತಿ ನಿಲಯಗಳ ಸಮಸ್ಯೆಗಳನ್ನು ಪರಿಹರಿಸಲು ತಮ್ಮನ್ನು ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರಕ್ಕೆ ವಿಶೇಷಾಧಿಕಾರಿಯಾಗಿ ನೇಮಕ ಮಾಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ಸದರಿಯವರಿಗೆ ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿಯಾಗಿ ನೇಮಕ ಮಾಡುವ ಬಗ್ಗೆ ದಿನಾಂಕಃ08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಡಾ. ರಾಜೇಂದ್ರ ಪ್ರಸಾದ್ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗಕ್ಕೆ ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಲು ಸಭೆಯಲ್ಲಿದ್ದ ಎಲ್ಲಾ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿ ಒಮ್ಮತದಿಂದ ಅನುಮೋದನೆ ನೀಡಿದರು.

1. ಸದರಿಯವರು ಚಿತ್ರದುರ್ಗದಲ್ಲಿ ವಾಸ್ತವ್ಯ ಇರುವುದರಿಂದ ಪ್ರಯಾಣ ಭತ್ಯೆ ಅನ್ವಯಿಸುವುದಿಲ್ಲ.
2. ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಿಸಲು ಕ್ರಮವಹಿಸುವುದು.
3. ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ನಿರ್ದೇಶಾನುಸಾರವಾಗಿ ಕಾರ್ಯನಿರ್ವಹಿಸುವುದು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(05/26) |

## –:ಟಿಪ್ಪಣಿ:–

**ವಿಷಯಃ ಪ್ರೊ. ವಿರುಪಾಕ್ಷಯ್ಯ ಡಿ.ಬಿ.ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ – ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖಃ
1. ಪ್ರೊ. ವಿರುಪಾಕ್ಷಯ್ಯ ಡಿ.ಬಿ.ಎಂ., ಪ್ರಾಧ್ಯಾಪಕರು ಇವರ ಮನವಿ ದಿನಾಂಕಃ 09.04.2026
2. ವಿ.ವಿ. ಕಛೇರಿ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/630/2026–27/365, ದಿನಾಂಕಃ 21.04.2026

*****

ಪ್ರೊ. ವಿರುಪಾಕ್ಷಯ್ಯ ಡಿ.ಬಿ.ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ Tokyo - Japan ನಲ್ಲಿ ದಿನಾಂಕಃ26.04.2026 ರಿಂದ 27.04.2026ರವರೆಗೆ ಆಯೋಜಿಸಿರುವ ICMHS-2026 ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಭಾಷಣಗಾರರಾಗಿ ಹಾಜರಾಗಲು ಹಾಗೂ 29.04.2026 ರಿಂದ 30.04.2026ರವರೆಗೆ ICMBS-2026 ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಹಾಗೂ ದಿನಾಂಕಃ23.04.2026 ರಿಂದ 08.05.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರೊ. ವಿರುಪಾಕ್ಷಯ್ಯ ಡಿ.ಬಿ.ಎಂ., ಪ್ರಾಧ್ಯಾಪಕರು ಇವರಿಗೆ ದಿನಾಂಕಃ23.04.2026 ರಿಂದ 08.05.2026 (ಪ್ರಯಾಣ ದಿನಗಳನ್ನು ಸೇರಿಸಿ) ರವರೆಗೆ Japan ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಆರ್ಥಿಕ ಸೌಲಭ್ಯ ರಹಿತ ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಲಾಗಿದೆ. ತತ್ಸಂಬಂಧ, ದಿನಾಂಕಃ08.05.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ವಿಷಯ ಮಂಡಿಸಿದೆ.

### :: ನಿರ್ಣಯ ::

ಪ್ರೊ. ವಿರುಪಾಕ್ಷಯ್ಯ ಡಿ.ಬಿ.ಎಂ., ಪ್ರಾಧ್ಯಾಪಕರು ಇವರು ದಿನಾಂಕಃ23.04.2026 ರಿಂದ 08.05.2026 (ಪ್ರಯಾಣ ದಿನಗಳನ್ನು ಸೇರಿಸಿ) Tokyo - Japan ನಲ್ಲಿ ದಿನಾಂಕಃ26.04.2026 ರಿಂದ 27.04.2026ರವರೆಗೆ ಆಯೋಜಿಸಿರುವ ICMHS-2026 ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಭಾಷಣಗಾರರಾಗಿ ಭಾಗವಹಿಸಿರುವುದಕ್ಕೆ ಹಾಗೂ 29.04.2026 ರಿಂದ 30.04.2026ರವರೆಗೆ ICMBS-2026 ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊರೆ ಇಲ್ಲದೇ ಭಾಗವಹಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(05/26) |

## –: ಟಿಪ್ಪಣಿ :–

**ವಿಷಯ:** **ಡಾ. ಸಿದ್ದಪ್ಪ ಭೀ ಕಕ್ಕಳಮೇಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಸ್ನಾತಕೋತ್ತರ ಯೋಗ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಯನ್ನಾಗಿ ನೇಮಕ ಮಾಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಕುರಿತು.**

ಉಲ್ಲೇಖ: ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಮಾಸನಿ/02/2026-27/220, ದಿನಾಂಕ: 09.04.2026

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಸಿದ್ದಪ್ಪ ಭೀ. ಕಕ್ಕಳಮೇಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಯೋಗ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ದಿನಾಂಕ:09.04.2026ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ತತ್ಸಂಬಂಧ, ಡಾ. ಸಿದ್ದಪ್ಪ ಭೀ ಕಕ್ಕಳಮೇಲಿ – ಇವರನ್ನು ಸ್ನಾತಕೋತ್ತರ ಯೋಗ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ನೇಮಕ ಮಾಡಿರುವುದಕ್ಕೆ ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ವಿಷಯ ಮಂಡಿಸಿದೆ.

### :: ನಿರ್ಣಯ ::

ಡಾ. ಸಿದ್ದಪ್ಪ ಭೀ. ಕಕ್ಕಳಮೇಲಿ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಯೋಗ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ದಿನಾಂಕ:09.04.2026ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಿರುವುದಕ್ಕೆ ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.02(f)/(05/26) |

## –: ಟಿಪ್ಪಣಿ :–

**ವಿಷಯಃ ಯುಜಿಸಿ–ಸಿಎಎಸ್ ಯೋಜನೆಯಡಿ ವೃತ್ತಿ ಪದೋನ್ನತಿ ಪಡೆದ ಅಧ್ಯಾಪಕರುಗಳ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವಂತೆ ಕೋರಿರುವ ಬಗ್ಗೆ.**

ಉಲ್ಲೇಖ: ದಿನಾಂಕಃ 12.03.2026ರ ಸಿಂಡಿಕೇಟ್ ಸಭೆಯ ನಿರ್ಣಯ.

*********

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧ್ಯಾಪಕರುಗಳಿಗೆ ಯುಜಿಸಿ–2018ರ ನಿಯಮಾವಳಿಗಳ 4ನೇ ತಿದ್ದುಪಡಿ ಅನ್ವಯ ಹಿಂದಿನ ಸೇವೆಯನ್ನು ಪರಿಗಣಿಸಿ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಕುರಿತು ದಿನಾಂಕಃ12.03.2026ರಂದು ಏರ್ಪಡಿಸಿದ ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿತ್ತು. ಸದರಿ ಸಿಂಡಿಕೇಟ್ ಸಭೆಯು ವಿಷಯವನ್ನು ಮುಂದೂಡಲು ನಿರ್ಣಯಿಸಿರುತ್ತಾರೆ.

| ಕ್ರ ಸಂ. | ಹೆಸರು | ವಿಭಾಗ | ಪದೋನ್ನತಿ ನೀಡಿರುವ ಅರ್ಹತಾ ದಿನಾಂಕ | ಪರಿಷ್ಕರಿಸುವ ಅರ್ಹತಾ ದಿನಾಂಕ |
|---|---|---|---|---|
| 01 | ಡಾ. ಕೆ.ಎಂ. ಈಶ್ವರಪ್ಪ | ಭೌತಶಾಸ್ತ್ರ | 01.06.2022 | 24.07.2021 |
| 02 | ಡಾ. ಬಸವಣ್ಣ ಎಂ. | ಗಣಕ ವಿಜ್ಞಾನ | 21.11.2023 | 19.12.2022 |
| 03 | ಡಾ. ಸುಪ್ರಿಯ ಆರ್. | ವಾಣಿಜ್ಯಶಾಸ್ತ್ರ | 22.05.2023 | 27.06.2022 |
| 04 | ಡಾ. ಸತ್ಯನಾರಾಯಣ | ವಾಣಿಜ್ಯಶಾಸ್ತ್ರ | 27.03.2023 | 29.06.2022 |
| 05 | ಡಾ. ವೆಂಕಟೇಶ ಕೆ. | ಶಿಕ್ಷಣಶಾಸ್ತ್ರ | 06.03.2024 | 24.05.2022 |
| 06 | ಡಾ. ಶಿವಕುಮಾರ ಕಣಸೋಗಿ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ | 24.02.2023 | 24.05.2022 |
| 07 | ಡಾ. ಕೊಟ್ರೇಶ ಡಿ. | ಸಸ್ಯಶಾಸ್ತ್ರ | 24.09.2024 | 27.06.2022 |
| 08 | ಡಾ. ಶಿವಲಿಂಗಪ್ಪ ಬಿ.ಪಿ. | ಸಮಾಜಕಾರ್ಯ | 19.05.2023 | 25.06.2022 |
| 09 | ಡಾ. ಸೀಮ ಜೆ. ಪಟೇಲ್ | ಜೈವಿಕತಂತ್ರಜ್ಞಾನ | 13.02.2024 | 15.07.2022 |
| 10 | ಡಾ. ನಿರಂಜನ ಎಂ. ಹೆಚ್. | ಜೈವಿಕತಂತ್ರಜ್ಞಾನ | 22.11.2024 | 17.07.2022 |
| 11 | ಡಾ. ಆರ್. ಸೆಲ್ವಿ | ಅರ್ಥಶಾಸ್ತ್ರ | 27.11.2023 | 16.07.2022 |
| 12 | ಡಾ. ಬಿ.ಪಿ. ನಂದೀಶ್ವರಪ್ಪ | ರಸಾಯನಶಾಸ್ತ್ರ | 14.06.2023 | 19.08.2022 |
| 13 | ಡಾ. ಪ್ರಮೋದ್ ಎಸ್.ಎನ್. | ಆಹಾರತಂತ್ರಜ್ಞಾನ | 16.01.2023 | 21.08.2022 |
| 14 | ಡಾ. ಮಲ್ಲಿಕಾರ್ಜುನ ಕೆ. | ಕನ್ನಡ | 04.02.2025 | 02.12.2022 |
| 15 | ಡಾ. ಜಯರಾಮಯ್ಯ ವಿ. | ಕನ್ನಡ | 30.01.2025 | 04.12.2022 |
| 16 | ಡಾ. ವಿಶ್ವನಾಥ ಹೆಚ್. | ಕನ್ನಡ | 30.01.2025 | 02.12.2022 |

ತತ್ಸಂಬಂಧ ದಿನಾಂಕಃ08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮೇಲ್ಕಂಡ ವಿಷಯವನ್ನು ಪುನಃ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಮೇಲ್ಕಂಡ ಅಧ್ಯಾಪಕರುಗಳಿಗೆ ಯುಜಿಸಿ–2018ರ ನಿಯಮಾವಳಿಗಳ 4ನೇ ತಿದ್ದುಪಡಿಯನ್ವಯ ಹಿಂದಿನ ಸೇವೆಯನ್ನು ಪರಿಗಣಿಸಿ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಕುರಿತು ಸುಧೀರ್ಘವಾಗಿ ಚರ್ಚಿಸಿದ ಬಳಿಕ ಆಂತರಿಕ ಗುಣಮಟ್ಟ ಕೋಶ (IQAC) ಮುಖಾಂತರ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.02(g)/(05/26) |

## –: ಟಿಪ್ಪಣಿ :–

**ವಿಷಯ: ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗದಿಂದ ಪರಿಸರ ವಿಜ್ಞಾನ ವಿಭಾಗಕ್ಕೆ ಹುದ್ದೆ ಸಹಿತವಾಗಿ ವರ್ಗಾವಣೆ ಮಾಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖ:
1. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/483/2020–21/ 5466, ದಿನಾಂಕ: 01.03.2021
2. ಡಾ. ಶಾರದದೇವಿ ಕಳ್ಳಿಮನಿ ಮತ್ತು ಡಾ. ವೀರೇಶ್ ಎಸ್.ಜೆ, ಸಹಾಯಕ ಪ್ರಾಧ್ಯಾಪಕರುಗಳು ಇವರ ಮನವಿ ದಿನಾಂಕ: 23.03.2026
3. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/177/2022–23/ 3622, ದಿನಾಂಕ: 20.12.2022
4. ಡಾ. ಗಾಯತ್ರಿ ವೈದ್ಯ, ಸಹಾಯಕ ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆ: ದಾವಿವಿ/ಪವಿಅವಿ/2026–27, ದಿನಾಂಕ: 04.05.2026
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24.04.2026

*********

ಡಾ. ಶಾರದದೇವಿ ಕಳ್ಳಿಮನಿ, ಡಾ. ವೀರೇಶ್ ಎಸ್.ಜೆ. ಹಾಗೂ ಡಾ. ಗಾಯತ್ರಿ ವೈದ್ಯ – ಇವರುಗಳು ದಿನಾಂಕ:19.08.2019ರಂದು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಹಾರತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿರುತ್ತಾರೆ. ಸದರಿ ಅಧ್ಯಯನ ವಿಭಾಗಕ್ಕೆ ಒಟ್ಟು 12 ಅಧ್ಯಾಪಕರುಗಳು (ಪ್ರಾಧ್ಯಾಪಕ–01, ಸಹ ಪ್ರಾಧ್ಯಾಪಕ–04, ಸಹಾಯಕ ಪ್ರಾಧ್ಯಾಪಕ–07) ನೇಮಕಗೊಂಡಿರುತ್ತಾರೆ.

ಮುಂದುವರೆದು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಡಾ. ಶಾರದದೇವಿ ಕಳ್ಳಿಮನಿ, ಡಾ. ವೀರೇಶ್ ಎಸ್.ಜೆ ಡಾ. ಗಾಯತ್ರಿ ವೈದ್ಯ – ಇವರುಗಳನ್ನು ಉಲ್ಲೇಖಿತ (1) & (3)ರ ಅಧಿಕೃತ ಜ್ಞಾಪನ ಪತ್ರದಲ್ಲಿ ತಾತ್ಕಾಲಿಕವಾಗಿ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ನಿಯೋಜಿಸಲಾಗಿತ್ತು.

ಸದರಿ ಅಧ್ಯಾಪಕರುಗಳು ಪರಿಸರ ವಿಜ್ಞಾನ ವಿಷಯದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪೂರ್ಣಗೊಳಿಸಿರುವುದರಿಂದ ತಮ್ಮನ್ನು ಹುದ್ದೆ ಸಹಿತವಾಗಿ (With Post) ಮತ್ತು ಶ್ರೇಣಿಯೊಂದಿಗೆ (Grade) ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ವರ್ಗಾವಣೆ ಮಾಡುವಂತೆ ಉಲ್ಲೇಖಿತ (2) ಮತ್ತು (3)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಸರ್ಕಾರದಿಂದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ. ತತ್ಸಂಬಂಧ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ವರ್ಗಾವಣೆ ಮಾಡುವ ಬಗ್ಗೆ ದಿನಾಂಕ: 08.05.2026ರಂದು ಏರ್ಪಡಿಸಿರುವ ಸಭೆಗೆ ವಿಷಯ ಮಂಡಿಸಿದೆ.

### :: ನಿರ್ಣಯ ::

ಈ ಕುರಿತು ಸರ್ಕಾರದಿಂದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಯಾವುದೇ ಹುದ್ದೆಗಳು ಮಂಜೂರಾಗದೇ ಇರುವುದರಿಂದ ಈ ಕುರಿತು ಸರ್ಕಾರಕ್ಕೆ ಪತ್ರಿಸಲು ಹಾಗೂ ಸರ್ಕಾರದಿಂದ ಅನುಮೋದನೆ ಬರುವವರೆಗೂ ಪಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗದಲ್ಲಿ 03 ವರ್ಷದವರೆಗೆ ನಿಯೋಜಿಸಿ ಮುಂದುವರೆಸುವಂತೆ ನಿರ್ಣಯಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಮಾ.ಸ.ನಿ. ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.02(h)/(05/26) |

## –: ಟಿಪ್ಪಣಿ :–

**ವಿಷಯಃ ಪ್ರೊ. ಬಿ.ಡಿ ಕುಂಬಾರ, ಕುಲಪತಿಗಳು, ದಾವಿವಿ – ಇವರ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕಾಗಿ ಮಂಜೂರಾತಿ ನೀಡುವ ಕುರಿತು.**

ಉಲ್ಲೇಖಃ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 04.05.2026

*********

ಪ್ರೊ. ಬಿ.ಡಿ ಕುಂಬಾರ ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರ ಖಾತೆಯಲ್ಲಿರುವ ಉಳಿದ 43 ದಿನಗಳ ಗಳಿಕೆ ರಜೆಯನ್ನು ಸದರಿಯವರು ಕುಲಪತಿಯ ಹುದ್ದೆಯಿಂದ ನಿರ್ಗಮಿಸುತ್ತಿರುವ ಹಿನ್ನೆಲೆಯಲ್ಲಿ ನಗದೀಕರಣ ಸೌಲಭ್ಯಕ್ಕಾಗಿ ದಿನಾಂಕಃ31.05.2026 ರಂದು ಇದ್ದಂತಹ ಮೂಲ ವೇತನ ಹಾಗೂ ತುಟ್ಟಿಭತ್ಯೆಗನುಗುಣವಾಗಿ ಒಟ್ಟು ರೂ.4,47,095/– (ರೂಪಾಯಿ ನಾಲ್ಕು ಲಕ್ಷದ ನಲವತ್ತೇಳು ಸಾವಿರದ ತೊಂಭತ್ತೈದು ಮಾತ್ರ) ಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಪಾವತಿಸಲಾಗಿದ್ದು, ಈ ಕುರಿತು ದಿನಾಂಕಃ08.05.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ದಿನಾಂಕಃ31.05.2026 ರಂದು ಕುಲಪತಿಯ ಹುದ್ದೆಯಿಂದ ನಿರ್ಗಮಿಸುತ್ತಿರುವ ಹಿನ್ನೆಲೆಯಲ್ಲಿ ಇವರ ಖಾತೆಯಲ್ಲಿ ಉಳಿದಿರುವ 43 ದಿನಗಳ ಗಳಿಕೆ ರಜೆಗಳನ್ನು ನಗದೀಕರಣಗೊಳಿಸಿ ದಿನಾಂಕಃ31.05.2026 ರಂದು ಇದ್ದಂತಹ ಮೂಲ ವೇತನ ಹಾಗೂ ತುಟ್ಟಿಭತ್ಯೆಗನುಗುಣವಾಗಿ ಒಟ್ಟು ರೂ.4,47,095/– ಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಪಾವತಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.02(j)/(05/26) |

## –ಃ ಟಿಪ್ಪಣಿ ಃ–

**ವಿಷಯಃ** **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಕುರಿತು.**

ಉಲ್ಲೇಖಃ ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃದಾವಿ/ಮಾಸನಿ/540(2)/2025–26/1956, ದಿನಾಂಕಃ 05.08.2025

*********

ಪ್ರೊ. ಮಮತ ಜಿ.ಪಿ., ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ದಿನಾಂಕಃ22.08.2025 ರಿಂದ 21.08.2027 ರವರೆಗೆ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಮುಂದುವರೆದು, ಪ್ರೊ. ಮಮತ ಜಿ.ಪಿ. ಇವರು ದಿನಾಂಕಃ30.05.2026 ರಂದು ವಯೋನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಸದರಿ ವಿಭಾಗಕ್ಕೆ ಜೇಷ್ಠತಾ ಪಟ್ಟಿಯನುಸಾರ ಅಧ್ಯಕ್ಷರನ್ನು ನೇಮಕ ಮಾಡುವ ಸಂಬಂಧ ದಿನಾಂಕಃ08.05.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರನ್ನು ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ದಿನಾಂಕ:01.06.2026 ರಿಂದ ಅನ್ವಯವಾಗುವಂತೆ 02 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.02(k)/(05/26) |

# –: ಟಿಪ್ಪಣಿ :–

**ವಿಷಯಃ ಪ್ರೊ. ಯು.ಎಸ್. ಮಹಾಬಲೇಶ್ವರ, ಪ್ರಾಧ್ಯಾಪಕರು – ಇವರು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಕ್ಕೆ ಶೈಕ್ಷಣಿಕ ಸಂದರ್ಶಕರಾಗಿ ಭೇಟಿ ನೀಡಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖಃ 1. ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಇವರ ಪತ್ರ ಸಂಖ್ಯೆಃ ದಾವಿವಿ/ಗಅ/2026–27/19, ದಿನಾಂಕಃ 06.05.2026

2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ 05.05.2026

*********

ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ದಿನಾಂಕಃ03.08.2026 ರಿಂದ 19.08.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಸಂದರ್ಶಕರಾಗಿ ಆಹ್ವಾನಿಸಿರುವ ಹಿನ್ನಲೆಯಲ್ಲಿ ಸದರಿ ದಿನಾಂಕಗಳಂದು ಮೇಲ್ಕಂಡ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಲು ಅನ್ಯಕಾರ್ಯ ನಿಮಿತ್ತ ರಜೆ ಮಂಜುರು ಮಾಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಪ್ರೊ. ಯು.ಎಸ್. ಮಹಾಬಲೇಶ್ವರ, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ದಿನಾಂಕಃ03.08.2026 ರಿಂದ 19.08.2026 ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಸಂದರ್ಶಕರಾಗಿ ಹಾಜರಾಗಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಬಗ್ಗೆ ದಿನಾಂಕಃ08.05.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ಪ್ರೊ. ಯು.ಎಸ್. ಮಹಾಬಲೇಶ್ವರ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ದಿನಾಂಕಃ03.08.2026 ರಿಂದ 19.08.2026ರ ವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) – ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಸಂದರ್ಶಕರಾಗಿ ಹಾಜರಾಗಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನುಮತಿ ಹಾಗೂ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.02(l)/(05/26) |

# –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿ 2026–27ನೇ ಆರ್ಥಿಕ ವರ್ಷದಲ್ಲಿ ನಿವೃತ್ತಿಯಾಗಲಿರುವ ಬೋಧಕರು ಮತ್ತು ಬೋಧಕೇತರರಿಗೆ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿ ಪಾವತಿಸುವ ಬಗ್ಗೆ.**

ಉಲ್ಲೇಖಃ 1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:12.03.2026 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡಿರುವ ನಿರ್ಣಯ
2. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ:148:ಹೆಚ್‌ಪಿಯು:2020: ದಿನಾಂಕ:31.03.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ06.05.2026

*********

ವಿಶ್ವವಿದ್ಯಾನಿಲಯದಲ್ಲಿ 2026–27ನೇ ಆರ್ಥಿಕ ಸಾಲಿನಲ್ಲಿ ವಿವಿಧ ದಿನಾಂಕಗಳಂದು ನಿವೃತ್ತರಾಗಲಿರುವ ಬೋಧಕ/ಬೋಧಕೇತರರಿಗೆ ನಿವೃತ್ತಿ ವೇತನ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸುವ ಸಂಬಂಧ ಸರ್ಕಾರದಿಂದ ಅನುದಾನ ಪಡೆಯುವ ಸಲುವಾಗಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕೆಂದು ದಿನಾಂಕ:12.03.2026 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಸದರಿ ನಿರ್ಣಯದ ಹಿನ್ನೆಲೆಯಲ್ಲಿ 2026–27ನೇ ಆರ್ಥಿಕ ಸಾಲಿನಲ್ಲಿ ನಿವೃತ್ತರಾಗಲಿರುವ ಬೋಧಕ/ಬೋಧಕೇತರರಿಗೆ ಪಾವತಿಸಬೇಕಾದ ನಿವೃತ್ತಿ ವೇತನ ಮತ್ತು ಪಿಂಚಣಿ ಸೌಲಭ್ಯಗಳ (DCRG and Leave Encashment Grant) ವಿವರಗಳನ್ನು ಸಿದ್ದಪಡಿಸಿ, ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದರೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವವರೆಗೆ ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲದಿಂದ ನಿವೃತ್ತರಾಗಲಿರುವ ನೌಕರರಿಗೆ ಅರ್ಹ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರುಮಾಡಿ ಪಾವತಿಸುವ ಬಗ್ಗೆ ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಸದರಿ ಮೊತ್ತವನ್ನು ಪೆನ್ಷನ್ ನಿಧಿಗೆ ಮರುತೇವಣಿ ಮಾಡಬಹುದಾಗಿದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ 2026–27ನೇ ಸಾಲಿನಲ್ಲಿ ನಿವೃತ್ತರಾಗಲಿರುವ ಬೋಧಕ ಹಾಗೂ ಬೋಧಕೇತರರಿಗೆ ನಿವೃತ್ತಿ ವೇತನ ಮತ್ತು ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಿ ಪಾವತಿಸುವ ಬಗ್ಗೆ ದಿನಾಂಕಃ08.05.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

2026–27ನೇ ಆರ್ಥಿಕ ಸಾಲಿನಲ್ಲಿ ನಿವೃತ್ತರಾಗಲಿರುವ ವಿಶ್ವವಿದ್ಯಾನಿಲಯದ ಬೋಧಕ/ ಬೋಧಕೇತರ ನೌಕರರುಗಳಿಗೆ ನಿಯಮಾನುಸಾರ ಪಾವತಿಸಬೇಕಾದ ನಿವೃತ್ತಿ ವೇತನ ಮತ್ತು ಪಿಂಚಣಿ ಸೌಲಭ್ಯಗಳನ್ನು – ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಹಣಕಾಸಿನ ಲಭ್ಯತೆಯನುಸಾರ ಪಾವತಿಸಲು ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಸದರಿ ಮೊತ್ತವನ್ನು ಪಿಂಚಣಿ ನಿಧಿಗೆ ಮರುತೇವಣಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.02(m)/(05/26) |

## –: ಟಿಪ್ಪಣಿ :–

**ವಿಷಯಃ ಬೋಧಕೇತರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಕುರಿತು.**

ಉಲ್ಲೇಖಃ ವಿಶ್ವವಿದ್ಯಾನಿಲಯ ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/08/2025–26/5251(ಎ), ದಿನಾಂಕ:06.03.2026

*********

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ನಿಯಮಗಳನುಸಾರ ಸಿದ್ದಪಡಿಸಲು ಉಲ್ಲೇಖಿತ ಪತ್ರದಲ್ಲಿ ಪರಿಣಿತರ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕಃ22.04.2026 ಹಾಗೂ 27.04.2026 ರಂದು ನಡೆದ ಜೇಷ್ಠತಾ ಪಟ್ಟಿ ರಚಿಸುವ ಪರಿಣಿತರ ಸಮಿತಿಯ ಸಭೆಯಲ್ಲಿ ರಾಜ್ಯ ಸರ್ಕಾರದ ಚಾಲ್ತಿಯಲ್ಲಿರುವ ಕೆ.ಸಿ.ಎಸ್. (ಜೇಷ್ಠತಾ) ನಿಯಮಗಳನ್ವಯ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕೇತರ ಸಿಬ್ಬಂದಿಗಳ ಲಭ್ಯವಿರುವ ಸೇವಾ ಪುಸ್ತಕದ ದಾಖಲೆಗಳ ಆಧಾರದ ಮೇರೆಗೆ ಆಡಳಿತಾತ್ಮಕ ಅನುಕೂಲಕ್ಕಾಗಿ 01.01.2025 ರಿಂದ 31.12.2025ರ Block ಅವಧಿಗೆ ಖಾಯಂ ಬೋಧಕೇತರ ಸಿಬ್ಬಂದಿಗಳ ಕಲ್ಯಾಣ ಕರ್ನಾಟಕ ವೃಂದ (371ಜೆ) ಹಾಗೂ ಮಿಕ್ಕುಳಿದ ವೃಂದಗಳಿಗೆ (ಎ,ಬಿ,ಸಿ ಮತ್ತು ಡಿ) ಪ್ರತ್ಯೇಕವಾದ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ಅಂತಿಮಗೊಳಿಸಿರುತ್ತದೆ. ಸದರಿ ಪಟ್ಟಿಯನುಸಾರ ಮುಂದಿನ ಕ್ರಮಕೈಗೊಳ್ಳುವ ಸಂಬಂಧ ಮುಂಬಡ್ತಿ ಹೊಂದಿದ ವೃಂದವಾರು ಹುದ್ದೆಗಳಿಗೆ ಕಾಲಂ 07ರಲ್ಲಿನ ದಿನಾಂಕವನ್ನು ಪರಿಶೀಲಿಸಿ **ನೇಮಕಾತಿಗೆ/ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ** (ಕಾಲಂ 8) ವನ್ನು ಸೇರ್ಪಡಿಸಬೇಕಾಗಿರುತ್ತದೆ. ಸದರಿ ದಿನಾಂಕಗಳನ್ನು (ಕಾಲಂ8) ಸಮಿತಿಯ ಅವಗಾಹನೆಗೆ ತಂದು ಅಂತಿಮಗೊಳಿಸಬೇಕಾಗಿದ್ದು, ಸದರಿ ವಿಷಯವನ್ನು ದಿನಾಂಕಃ08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

- ಡಾ. ಜಿ. ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – 2017 ರ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿಯ ಕುರಿತು ಸಂಕ್ಷಿಪ್ತವಾಗಿ ವಿವರಣೆ ನೀಡಿ ರೋಸ್ಟರ್ ಬದಲಾಯಿಸಿರುವ ಬಗ್ಗೆ ಮಾಹಿತಿ ಕೋರಿದರು.
- ಕುಲಸಚಿವರು(ಆ) ಇವರು ಮಾತನಾಡಿ – ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಸಭೆಗೆ ತಿಳಿಸಿದರು.
- ಶ್ರೀ ದ್ಯಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಈಗ ಸಿದ್ದಪಡಿಸಿರುವ ಜೇಷ್ಠತಾ ಪಟ್ಟಿಯನ್ನು ಎಲ್ಲಾ ಬೋಧಕೇತರ ನೌಕರರ ಸೇವಾ ಪುಸ್ತಕವನ್ನು ಪರಿಶೀಲಿಸಿದ ನಂತರ ಸಮಿತಿಯು ಹೊಸ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.
- ಡಾ. ಜಿ. ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಇಷ್ಟು ವರ್ಷ ಹಳೆಯ ಜೇಷ್ಠತಾ ಪಟ್ಟಿಯನ್ನು ಮುಂದುವರೆಸಿ ಬಡ್ತಿ ನೀಡಿ ಈಗ ಹೊಸ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಿರುವ ಬಗ್ಗೆ ಮಾಹಿತಿ ಕೋರಿದರು.

ಕುಲಸಚಿವರು | ಕುಲಪತಿಗಳು

- ಶ್ರೀ ದ್ಯಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಸದರಿ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ 06 ತಿಂಗಳಿಂದ ಈ ಕುರಿತು ಪರಿಶೀಲಿಸಿದ ನಂತರ ಸಮಿತಿಯ ನಿರ್ಣಯದಂತೆ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂದು ಸಭೆಗೆ ತಿಳಿಸಿದರು.
- ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಬಂಧಿಸಿದ ನೌಕರರು ಮಾನ್ಯ ಉಚ್ಛನಾಯಾಲಯದಲ್ಲಿ ದೂರು ದಾಖಲಿಸಬಹುದೆಂದು ಈ ಹಿಂದಿನ ಉಚ್ಛನಾಯಾಲಯದ ಆದೇಶದಲ್ಲಿ ತಿಳಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
- ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಬೋಧಕೇತರ ನೌಕರರ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಕೆಲವು ಬೋಧಕೇತರ ನೌಕರರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದರಿಂದ ಪ್ರಕರಣ ಇತ್ಯರ್ಥವಾಗುವವರೆಗೆ ನಿಯಮಾನುಸಾರ ಕ್ರಮ ಕೈಗೊಳ್ಳಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿರು.
- ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ – 1) ಶ್ರೀಮತಿ ಶಾರದಾ ಪಾಟೀಲ, 2) ಡಾ. ಜಿ.ಕೆ. ಪ್ರೇಮ ಹಾಗೂ 3) ಶ್ರೀ ತಿಪ್ಪೇಸ್ವಾಮಿ ಹೆಚ್ ಇವರುಗಳು ಜೇಷ್ಠತಾ ಪಟ್ಟಿಯ ಕುರಿತು ಸ್ಪಷ್ಟವಾದ ಮಾಹಿತಿ ಇಲ್ಲದೇ ಇರುವುದರಿಂದ ಜೇಷ್ಠತಾ ಪಟ್ಟಿಗೆ ಸಮ್ಮತಿ ಇಲ್ಲವೆಂದು ಸಭೆಗೆ ತಿಳಿಸಿದರು.
- ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ – 1) ಶ್ರೀ ದ್ಯಾಮಪ್ಪ 2) ಡಾ. ಬಿ. ಎನ್. ಉಮೇಶ್ 3) ಡಾ. ಪ್ರಶಾಂತ ಎನ್.ಸಿ 4) ಶ್ರೀ ಶಬೀರ್ ಅಲಿಖಾನ್ 5) ಪ್ರೊ. ಲೋಕೇಶ್ ಎಂ. ಯು (ಡೀನರು) 6) ಪ್ರೊ. ಮಮತ ಜಿ.ಪಿ. (ಪ್ರಾಧ್ಯಾಪಕರು) ಹಾಗೂ ಪ್ರಾಂಶುಪಾಲರುಗಳಾದ 7) ಡಾ. ಜೋಮನ್ ಕೆ. ಜೆ 8) ಡಾ. ಎ.ಜೆ. ನೀತಾ 9) ಶ್ರೀ ತಿಪ್ಪೇಶ್ ಜಿ.ಆರ್ ಹಾಗೂ 10) ಶ್ರೀ ಭರಮಗೌಡ ಪಾಟೀಲ – ಇವರುಗಳು ಜೇಷ್ಠತಾ ಪಟ್ಟಿಯ ಕುರಿತು ಸಮಿತಿಯು ನೀಡಿರುವ ವರದಿಯನ್ನು ಅಂತಿಮ ಮಾಡಲು ತಮ್ಮ ಸಮ್ಮತಿಯನ್ನು ಸೂಚಿಸಿದರು.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಪರಿಣಿತರ ಸಮಿತಿಯ ಸಭೆಯ ನಿರ್ಣಯದಂತೆ ಬೋಧಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಲಾದ ನಡಾವಳಿಗಳನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಮೂವರು ಸದರಿ ನಡಾವಳಿಗಳಿಗೆ ಸಹಮತ ಸೂಚಿಸಲಾಗಿಲ್ಲ. ಆದರೆ, ಸಮಿತಿಯು ಮಾನ್ಯ ಉಚ್ಛನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ನಿಯಮಗಳನ್ವಯ ರಚಿಸಲಾದ ಪಟ್ಟಿಯನ್ನು ಸಭೆಯು ಪರಿಶೀಲಿಸಿ ನಂತರ ಬಹುಮತದೊಂದಿಗೆ ಸದರಿ ಬೋಧಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಗೆ ಅನುಮೋದನೆ ಸೂಚಿಸಲಾಯಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.02(n)/(05/26) |

## –: ಟಿಪ್ಪಣಿ :–

**ವಿಷಯ: ವಿಲೀನಿಕರಣಗೊಳಿಸಿದ ಕಿರಿಯ ಸಹಾಯಕ ಹುದ್ದೆಯ ಆದೇಶ ಹಿಂಪಡೆದಿರುವುದನ್ನು ಪರಿಶೀಲಿಸಿ ಮರು ನೇಮಕಾತಿ ಆದೇಶ ನೀಡುವಂತೆ ಕೋರಿರುವ ಕುರಿತು.**

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ ಇಡಿ 102 ಯುಎಸ್‌ವಿ 2008 ದಿನಾಂಕ:02.04.2009
2. ಕುವೆಂಪು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಕುವಿ:ಮಾಸನಿ–2:/1212 2009–10 ದಿನಾಂಕ:12.06.2009
3. ದಾವಿವಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿಮಾಸನಿ/2/34/2021–22/6845 ದಿನಾಂಕ:23.03.2022
4. ದಾವಿವಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ದಾವಿವಿ/ಮಾಸನಿ/34/2022–23/4475 ದಿನಾಂಕ:06.02.2023
5. ಸರ್ಕಾರದ ಪತ್ರ ಸಂಖ್ಯೆ:ಇಡಿ 04 ಯುಎನ್‌ಇ 23 ದಿನಾಂಕ:03.05.2023
6. ಶ್ರೀ ಶೋಭ್ಯಾ ನಾಯ್ಕ್ ಹೆಚ್ ಹಂಗಾಮಿ ಕಿರಿಯ ಸಹಯಕರು ಇವರ ಮನವಿ ದಿನಾಂಕ:04.05.2026
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.05.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೆಖ (1)ರ ಪತ್ರದಲ್ಲಿ ಶ್ರೀ ಶೋಭ್ಯಾ ನಾಯ್ಕ್ ಹೆಚ್ ಇವರಿಗೆ ಸಂಚಿತ ವೇತನ ಆಧಾರದ ಮೇಲೆ ಸೂಕ್ತ ಹುದ್ದೆಯನ್ನು ನೀಡಬೇಕಾಗುತ್ತದೆ ಹಾಗೂ ನಂತರ ನೇರ ನೇಮಕಾತಿ ಸಮಯದಲ್ಲಿ ಇವರು ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಉದ್ಯೋಗ ನೀಡುವುದನ್ನು ಪರಿಶೀಲಿಸಬಹುದಾಗಿದೆ.

ಉಲ್ಲೇಖ (2)ರ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಶೋಭ್ಯಾ ನಾಯ್ಕ್ ಹೆಚ್ ಇವರಿಗೆ ಸಂಚಿತ ವೇತನ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಲಾಗಿರುತ್ತದೆ.

ಉಲ್ಲೇಖ (3)ರ ದಾವಿವಿ ಅಧಿಸೂಚನೆ ಪತ್ರದಲ್ಲಿ ದಿನಾಂಕ:17.08.2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಶ್ರೀ ಶೋಭ್ಯಾ ನಾಯ್ಕ್ ಹೆಚ್., ಹಂಗಾಮಿ ಕಿರಿಯ ಸಹಾಯಕರು ಇವರನ್ನು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹಾಗೂ ನೇರ ನೇಮಕಾತಿಗೆ ಮೀಸಲಿರುವ ಕಿರಿಯ ಸಹಾಯಕ ಹುದ್ದೆಗೆದುರಾಗಿ ಖಾಯಂಗೊಳಿಸಲಾಗಿರುತ್ತದೆ.

ಉಲ್ಲೇಖ (4) ದಾವಿವಿ ಅಧಿಕೃತ ಜ್ಞಾಪನ ಪತ್ರದನ್ವಯ ದಿನಾಂಕ:25.01.2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಸದರಿಯವರ ಕಿರಿಯ ಸಹಾಯಕ ಹುದ್ದೆಯನ್ನು ಹಿಂಪಡೆಯಲಾಗಿರುತ್ತದೆ.

ಉಲ್ಲೆಖ (5)ರ ಸರ್ಕಾರವು ಶ್ರೀ ಶೋಭ್ಯಾ ನಾಯ್ಕ್ ಹೆಚ್., ಇವರನ್ನು ಖಾಯಂಗೊಳಿಸಿ ಹೊರಡಿಸಲಾದ ಅಧಿಕೃತ ಜ್ಞಾಪನ ಪತ್ರವನ್ನು ಹಿಂಪಡೆಯುವಂತೆ ತಿಳಿಸಿ ಇನ್ನು ಮುಂದೆ ಇಂತಹ ಪ್ರಕರಣಗಳು ಪುನರಾವರ್ತನೆಯಾಗದಂತೆ ಹಾಗೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಂಗಾಮಿ ನೌಕರರನ್ನು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನೀಕರಣಗೊಳಿಸದಂತೆ ತಿಳಿಸಿರುತ್ತದೆ.

**ಮುಂದುವರೆದಿದೆ...**

ಕುಲಸಚಿವರು ಕುಲಪತಿಗಳು

ಉಲ್ಲೇಖ (6)ರಲ್ಲಿ ಶ್ರೀ ಶೋಭ್ಯಾ ನಾಯ್ಕ್ ಹೆಚ್., ಇವರು ಈ ಹಿಂದೆ ಖಾಯಂಗೊಳಿಸಿ ನೀಡಲಾದ ಆದೇಶವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ಮರು ಖಾಯಂ ನೇಮಕಾತಿ ಆದೇಶವನ್ನು ನೀಡುವಂತೆ ಕೋರಿರುತ್ತಾರೆ. ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ದಿನಾಂಕಃ08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಸಲ್ಲಿಸಿದೆ.

**:: ನಿರ್ಣಯ ::**

ಶ್ರೀ ಶೋಭ್ಯಾ ನಾಯ್ಕ್ ಹೆಚ್., ಹಂಗಾಮಿ ಕಿರಿಯ ಸಹಾಯಕರು ಇವರನ್ನು ವಿಶ್ವವಿದ್ಯಾನಿಲಯದ ಕಿರಿಯ ಸಹಾಯಕ ಹುದ್ದೆಗೆ ವಿಲೀನಿಕರಣಗೊಳಿಸಿ ಹಿಂಪಡೆಯಲಾಗಿರುವುದನ್ನು ಪರಿಶೀಲಿಸಿ ಮರು ನೇಮಕಾತಿ ಆದೇಶ ನೀಡುವ ಕುರಿತು ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು    ಕುಲಪತಿಗಳು

| ಮಾ.ಸ.ನಿ. ವಿಭಾಗ – 16 | |
|---|---|
| ವಿಷಯ ಸಂಖ್ಯೆ: | ಸಿಂ.02(೦)/(05/26) |

# –: ಟಿಪ್ಪಣಿ :–

**ವಿಷಯಃ** **ವಿಲೀನಿಕರಣಗೊಳಿಸಿದ ಕಿರಿಯ ಸಹಾಯಕ ಹುದ್ದೆಯ ಆದೇಶ ಹಿಂಪಡೆದಿರುವುದನ್ನು ಪರಿಶೀಲಿಸಿ ಮರು ನೇಮಕಾತಿ ಆದೇಶ ನೀಡುವಂತೆ ಕೋರಿರುವ ಕುರಿತು.**

ಉಲ್ಲೇಖಃ
1. ದಾವಿವಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿಮಾಸನಿ/2/34/2021–22/6845 ದಿನಾಂಕ:23.03.2022
2. ದಾವಿವಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ದಾವಿವಿ/ಮಾಸನಿ/34/2022–23/4475 ದಿನಾಂಕ:06.02.2023
3. ಸರ್ಕಾರದ ಪತ್ರ ಸಂಖ್ಯೆ:ಇಡಿ 04 ಯುಎನ್ಇ 23 ದಿನಾಂಕ:03.05.2023
4. ಶ್ರೀ ಪ್ರಶಾಂತ ವಿ ಹಂಗಾಮಿ ಕಿರಿಯ ಸಹಯಕರು ಇವರ ಮನವಿ ದಿನಾಂಕ:07.05.2026
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 07.05.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ದಾವಿವಿ ಅಧಿಸೂಚನೆ ಪತ್ರದಲ್ಲಿ ದಿನಾಂಕ: 17.08.2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಶ್ರೀ ಪ್ರಶಾಂತ ವಿ ಹಂಗಾಮಿ ಕಿರಿಯ ಸಹಾಯಕರು ಇವರನ್ನು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹಾಗೂ ನೇರ ನೇಮಕಾತಿಗೆ ಮೀಸಲಿರುವ ಕಿರಿಯ ಸಹಾಯಕ ಹುದ್ದೆಗೆದುರಾಗಿ ಖಾಯಂಗೊಳಿಸಲಾಗಿರುತ್ತದೆ.

ಉಲ್ಲೇಖ (2) ದಾವಿವಿ ಅಧಿಕೃತ ಜ್ಞಾಪನ ಪತ್ರದನ್ವಯ ದಿನಾಂಕ:25.01.2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಸದರಿಯವರ ಕಿರಿಯ ಸಹಾಯಕ ಹುದ್ದೆಯನ್ನು ಹಿಂಪಡೆಯಲಾಗಿರುತ್ತದೆ.

ಉಲ್ಲೆಖ (3)ರಲ್ಲಿ ಶ್ರೀ ಪ್ರಶಾಂತ ವಿ ಇವರನ್ನು ಖಾಯಂಗೊಳಿಸಿ ಹೊರಡಿಸಲಾದ ಅಧಿಕೃತ ಜ್ಞಾಪನ ಪತ್ರವನ್ನು ಹಿಂಪಡೆಯುವಂತೆ ತಿಳಿಸಿ ಇನ್ನು ಮುಂದೆ ಇಂತಹ ಪ್ರಕರಣಗಳು ಪುನರಾವರ್ತನೆಯಾಗದಂತೆ ಹಾಗೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಂಗಾಮಿ ನೌಕರರನ್ನು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನೀಕರಣಗೊಳಿಸದಂತೆ ಸರ್ಕಾರವು ತಿಳಿಸಿರುತ್ತದೆ.

ಉಲ್ಲೇಖ (4)ರಲ್ಲಿ ಶ್ರೀ ಪ್ರಶಾಂತ ವಿ ಇವರು ಈ ಹಿಂದೆ ಖಾಯಂಗೊಳಿಸಿ ನೀಡಲಾದ ಆದೇಶವನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ಮರು ಖಾಯಂ ನೇಮಕಾತಿ ಆದೇಶವನ್ನು ನೀಡುವಂತೆ ಕೋರಿರುತ್ತಾರೆ. ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ದಿನಾಂಕಃ 08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ಶ್ರೀ ಪ್ರಶಾಂತ ವಿ., ಹಂಗಾಮಿ ಕಿರಿಯ ಸಹಾಯಕರು ಇವರನ್ನು ವಿಶ್ವವಿದ್ಯಾನಿಲಯದ ಕಿರಿಯ ಸಹಾಯಕ ಹುದ್ದೆಗೆ ವಿಲೀನಿಕರಣಗೊಳಿಸಿ ಹಿಂಪಡೆಯಲಾಗಿರುವುದನ್ನು ಪರಿಶೀಲಿಸಿ ಮರು ನೇಮಕಾತಿ ಆದೇಶ ನೀಡುವ ಕುರಿತು ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(05/26) |

# –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.**

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ:ಇಡಿ/212/ಯುಎನಿ/2024 ಬೆಂಗಳೂರು, ದಿನಾಂಕ:07.11.2025

2. ವಿಶ್ವವಿದ್ಯಾನಿಲಯದ ಸಂಖ್ಯೆಃದಾವಿವಿ/ಶೈವಿ/113/2026–27/277 ದಿನಾಂಕಃ16.04.2026

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಸಂಬಂಧಿಸಿದಂತೆ ಉಲ್ಲೇಖ (1) ರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಉಲ್ಲೇಖ (2) ರನ್ವಯ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ಪರಿಚಲಿಸಲಾಗಿದೆ.

**:2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ತರಗತಿಗಳ ಶೈಕ್ಷಣಿಕ ವೇಳಾಪಟ್ಟಿ:**

| ಕ್ರ.ಸಂ. | ಶೈಕ್ಷಣಿಕ ಕಾರ್ಯಕ್ರಮಗಳು | ದಿನಾಂಕ |
|---|---|---|
| 1 | 1ನೇ ಸೆಮಿಸ್ಟರ್ ತರಗತಿಗಳ ಪ್ರವೇಶಾತಿ ಪ್ರಕ್ರಿಯೆ | 16.04.2026 ರಿಂದ 30.06.2026 |
| 2 | 1ನೇ, 3ನೇ ಮತ್ತು 5ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ | 01.07.2026 |
| 3 | 1ನೇ, 3ನೇ ಮತ್ತು 5ನೇ ಸೆಮಿಸ್ಟರ್ ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 31.10.2026 |
| 4 | ಬೆಸ ಸೆಮಿಸ್ಟರ್ (1ನೇ, 3ನೇ ಹಾಗೂ 5ನೇ) ತರಗತಿಗಳ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಹಾಗೂ ರಜಾವಧಿ. | 01.11.2026 ರಿಂದ 05.12.2026 |
| 5 | ಸಮ (2ನೇ, 4ನೇ ಮತ್ತು 6ನೇ) ಸೆಮಿಸ್ಟರ್‌ಗಳ ತರಗತಿಗಳ ಪ್ರಾರಂಭ | 07.12.2026 |
| 6 | ಸಮ (2ನೇ, 4ನೇ ಮತ್ತು 6ನೇ) ಸೆಮಿಸ್ಟರ್ ತರಗತಿಗಳ ಮುಕ್ತಾಯ | 06.04.2027 |
| 7 | ಸಮ ಸೆಮಿಸ್ಟರ್ (2ನೇ, 4ನೇ ಹಾಗೂ 6ನೇ) ತರಗತಿಗಳ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಹಾಗೂ ರಜಾವಧಿ<br>2026–27ನೇ ಶೈಕ್ಷಣಿಕ ಸಾಲಿನ ಸಮ ಸೆಮಿಸ್ಟರ್‌ಗಳ ಅವಧಿ ಮುಕ್ತಾಯ. | 07.04.2027 ರಿಂದ 12.05.2027 |

ಸದರಿ ಶೈಕ್ಷಣಿಕ ವೇಳಾಪಟ್ಟಿಯನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಪರಿಚಲಿಸಲಾಗಿರುವ ಶೈಕ್ಷಣಿಕ ವೇಳಾ ಪಟ್ಟಿಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಸಿಂ.03(b)/(05/26) |

# –: ಟಿಪ್ಪಣಿ :–

**ವಿಷಯಃ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಪ್ರವೇಶ ಶುಲ್ಕದ ಕುರಿತು.**

ಉಲ್ಲೇಖ: 1. ವಿಶ್ವವಿದ್ಯಾನಿಲಯ ಸಂಖ್ಯೆಃ ದಾವಿವಿ/ ಶೈವಿ/ 219/ 2025–26/ 276 ದಿನಾಂಕಃ15.04.2026

2. ವಿಶ್ವವಿದ್ಯಾನಿಲಯ ಸಂಖ್ಯೆ: ದಾವಿವಿ/ ಶೈವಿ/ 302/ 2025–26/ 280 ದಿನಾಂಕ:16.04.2026

*********

ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳಲ್ಲಿನ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, 2024–25ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕಕ್ಕೆ ಶೇಕಡ 10 ರಷ್ಟು ಹೆಚ್ಚಿಸಿ Round off ಮಾಡಿ 2026–27ನೇ ಶೈಕ್ಷಣಿಕ ಸಾಲಿನ ಶುಲ್ಕ ತಃಖ್ತೆಯನ್ನು ಈ ಕೆಳಗಿನಂತೆ ಸಿದ್ಧಪಡಿಸಿ ಉಲ್ಲೇಖಿತ (1) ರ ಪತ್ರದನ್ವಯ ಹಾಗೂ ಉಲ್ಲೇಖ (2) ರ 2026–27ನೇ ಸಾಲಿನ ಸ್ನಾತಕ ಪದವಿಗಳ ಪ್ರವೇಶಾತಿಗೆ ಅರ್ಜಿಗಳನ್ನು ಅಹ್ವಾನಿಸುವ ಸುತ್ತೋಲೆಯ ಮೂಲಕ ಅಧಿಸೂಚಿಸಲಾಗಿರುತ್ತದೆ.(2025–26 ಸಾಲಿನಲ್ಲಿ ಶುಲ್ಕ ಹೆಚ್ಚಳ ಮಾಡಿರುವುದಿಲ್ಲ)

## FEE STRUCTURE FOR UNDER – GRADUATE COURSES FOR THE ACADEMIC YEAR 2026-27

### ಬಿ.ಎ. (B.A.)

| Sl. No. | Particulars | I[st] Year (Rs.) | II[nd] & III[rd] Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 290 | 290 | - |
| 2 | Registration | 165 | - | - |
| 3 | University Development Fund | 510 | 510 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **1275** | **1110** | **433** |

### ಬಿ.ಕಾಂ./B.Com

| Sl. No. | Particulars | I[st] Year (Rs.) | II[nd] & III[rd] Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 325 | 325 | - |
| 2 | Registration | 305 | - | - |
| 3 | University Development Fund | 510 | 510 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **1450** | **1145** | **433** |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

## B.Com in Banking Financial Services & Insurance (BFSI)

| Sl. No. | Particulars | Ist Year (Rs.) | IInd & IIIrd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 325 | 325 | - |
| 2 | Registration | 305 | - | - |
| 3 | University Development Fund | 510 | 510 | - |
| 4 | Sports Development Fund | 175 | 176 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **1450** | **1145** | **433** |

**P.T.O..**

## ಬಿ.ಎಸ್ಸಿ/B.Sc.

| Sl. No | Particulars | Ist Year (Rs.) | IInd & IIIrd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 325 | 325 | - |
| 2 | Registration | 205 | - | - |
| 3 | University Development Fund | 510 | 510 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Student Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **1350** | **1145** | **433** |

## ಬಿ.ಬಿ.ಎ./BBA

| Sl. No. | Particulars | Ist Year (Rs.) | IInd & IIIrd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 515 | 515 | - |
| 2 | Registration | 825 | - | - |
| 3 | University Development Fund | 550 | 550 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **2200** | **1375** | **433** |

## ಬಿ.ಎಸ್.ಡಬ್ಲ್ಯೂ/BSW

| Sl. No. | Particulars | Ist Year (Rs.) | IInd & IIIrd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 515 | 515 | - |
| 2 | Registration | 825 | - | - |
| 3 | University Development Fund | 550 | 550 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 7 | Skill Development Fee | - | - | 166 |
| 8 | Red Cross | - | - | 50 |
| | **TOTAL** | **2200** | **1375** | **433** |

ಮುಂದುವರೆದಿದೆ...

ಕುಲಸಚಿವರು                ಕುಲಪತಿಗಳು

ಬಿ.ಸಿ.ಎ./BCA

| Sl. No | Particulars | I^st Year (Rs.) | II^nd & III^rd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 1195 | 1195 | - |
| 2 | Registration | 3270 | - | - |
| 3 | University Development Fund | 875 | 875 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 8 | Skill Development Fee | - | - | 166 |
| 9 | Red Cross | - | - | 50 |
| | **TOTAL** | **5650** | **2380** | **433** |

ಬ್ಯಾಚುಲರ್ ಆಫ್ ಫಿಸಿಕಲ್ ಎಜುಕೇಷನ್(ಬಿ.ಪಿ.ಇಡಿ.)/Bachelor of Physical Education (B.P.Ed)

| Sl. No. | Particulars | I^st Year (Rs.) | II^nd & III^rd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 580 | 580 | - |
| 2 | Registration | 670 | - | - |
| 3 | University Development Fund | 710 | 710 | - |
| 4 | Sport Development Fund | 185 | 185 | 76 |
| 5 | ECA | 180 | 180 | 76 |
| 6 | Career Guidance Fund | 35 | 35 | - |
| 7 | Rovers and Rangers (Scouts & Guides) | 35 | 35 | - |
| 8 | Poor Students Fund | 20 | 20 | - |
| 9 | Literature | 35 | 35 | - |
| 10 | Skill Development Fee | - | - | 153 |
| 11 | Red Cross | - | - | 50 |
| | **TOTAL** | **2450** | **1780** | **355** |

ಬ್ಯಾಚುಲರ್ ಆಫ್ ಫ್ಯಾಷನ್ ಡಿಸೈನಿಂಗ್ (ಬಿ.ಎಫ್.ಡಿ.)/Bachelor of Fashion Designing (B.F.D)

| Sl. No | Particulars | I^st Year (Rs.) | II^nd & III^rd Year (Rs.) | Fees to be collected and retained by the college for conducting activities (Rs.) |
|---|---|---|---|---|
| 1 | Admission Fee (University) | 3015 | 3015 | - |
| 2 | Registration | 4695 | - | - |
| 3 | University Development Fund | 670 | 670 | - |
| 4 | Sports Development Fund | 175 | 175 | 127 |
| 5 | ECA | 115 | 115 | 90 |
| 6 | Poor Students Fund | 20 | 20 | - |
| 8 | Skill Development Fee | - | - | 166 |
| 9 | Red Cross | - | - | 50 |
| | **TOTAL** | **8690** | **3995** | **433** |

| **Existing other Admission Fees for 2026-27** | | |
|---|---|---|
| 1 | College Transfer Fee (Inter/Intra University) | Rs.3500/- |
| 2 | Foreign and NRI Students Fee | Rs.16500/- |
| 3 | Other Board Eligibility Fee (Students from out of State): | Rs.3000/- |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

ಸದರಿ ಶುಲ್ಕ ತಃಖ್ತೆಯನ್ನು ಹಾಗೂ 2026–27ನೇ ಸಾಲಿನ ಸ್ನಾತಕ ಪದವಿ ಪ್ರವೇಶ ಅಧಿಸೂಚನೆಯನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಸಲ್ಲಿಸಿದೆ.

ವಿವರಣೆ:

- ಡಾ. ಪ್ರಶಾಂತ ಎನ್.ಸಿ. ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಬಿ.ಸಿ.ಎ. & ಬಿ.ಬಿ.ಎ ಪದವಿಗಳಿಗೆ ನಿಗದಿಪಡಿಸಿರುವ ಶುಲ್ಕವನ್ನು ಕಡಿಮೆ ಮಾಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.
- ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಶುಲ್ಕ ನಿಗದಿಪಡಿಸುವ ಪೂರ್ವದಲ್ಲಿಯೇ ಸಭೆಯನ್ನು ಕರೆದು ಅನುಮೋದನೆ ಪಡೆಯುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.
- ಡಾ. ಜಿ.ಕೆ. ಪ್ರೇಮ., ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತೊಮ್ಮೆ ಪರಿಶೀಲಿಸಿ ಶುಲ್ಕ ಕಡಿಮೆ ಮಾಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.
- ಪ್ರೊ. ಬಿ.ಡಿ. ಕುಂಬಾರ, ಮಾನ್ಯ ಕುಲಪತಿಗಳು ಮಾತನಾಡಿ – ಎರಡು ವರ್ಷಕ್ಕೊಮ್ಮೆ ಶುಲ್ಕವನ್ನು 10% ಹೆಚ್ಚಿಸುತ್ತಾ ಬಂದಿದ್ದು ಕಳೆದ ವರ್ಷ ಶುಲ್ಕವನ್ನು ಹೆಚ್ಚಿಸಿರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯಕ್ಕೆ ಪಾವತಿಸುವ ಶುಲ್ಕ ಕಡಿಮೆ ಇರುವುದಾಗಿ ಸಭೆಗೆ ತಿಳಿಸಿದರು.

:: ನಿರ್ಣಯ ::

2024–25ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕಕ್ಕೆ ಶೇಕಡ 10% ರಷ್ಟು ಹೆಚ್ಚಿಸಿ Round off ಮಾಡಿ 2026–27ನೇ ಶೈಕ್ಷಣಿಕ ಸಾಲಿನ ಶುಲ್ಕ ತಃಖ್ತೆಯನ್ನು ಈ ಮೇಲ್ಕಂಡಂತೆ ಸಿದ್ಧಪಡಿಸಿ 2026–27ನೇ ಸಾಲಿನ ಸ್ನಾತಕ ಪದವಿಗಳ ಪ್ರವೇಶಾತಿಗೆ ಅಧಿಸೂಚನೆ ಹಾಗೂ ಅರ್ಜಿಗಳನ್ನು ಆಹ್ವಾನಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಶೈಕ್ಷಣಿಕ ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.03(c)/(05/26) |

# –: ಟಿಪ್ಪಣಿ :–

ವಿಷಯ: **KSHEC, ಬೆಂಗಳೂರು British Council ಸಹಯೋಗದೊಂದಿಗೆ SCOUT Initiative ಅಡಿ ವಿಶ್ವವಿದ್ಯಾನಿಲಯದ ಒಬ್ಬ ಅಧ್ಯಾಪಕರು ಹಾಗೂ 04 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಿಕೊಟ್ಟಿರುವ ಕುರಿತು.**

ಉಲ್ಲೇಖ:
1. ಪ್ರೊ. ಎಸ್.ಆರ್. ನಿರಂಜನ್ ಬೆಂಗಳೂರು, ಉನ್ನತ ಶಿಕ್ಷಣ ಕೌನ್ಸಿಲ್ – ಇವರ ಪತ್ರಸಂಖ್ಯೆ:KSHEC/VCP/SCOUT/2/2026/181, ದಿನಾಂಕ:29.01.2026.
2. ವಿಶ್ವವಿದ್ಯಾನಿಲಯದ ಆಯ್ಕೆ ಸಮಿತಿ ಪತ್ರ ಸಂಖ್ಯೆ:ದಾವಿವಿ/ಶೈಕ್ಷಣಿಕ ವಿಭಾಗ/21/2025–26/4887, ದಿನಾಂಕ:09.02.2026
3. ವಿಶ್ವವಿದ್ಯಾನಿಲಯದ ಸಮಿತಿ ನಡಾವಳಿಯ ದಿನಾಂಕ:10.02.2026.
4. ವಿಶ್ವವಿದ್ಯಾನಿಲಯದ ಪತ್ರಸಂಖ್ಯೆ:ದಾವಿವಿ/ಶೈಕ್ಷಣಿಕ ವಿಭಾಗ/21/2025–26/4944, ದಿನಾಂಕ:13.02.2026.
5. ಇಮೇಲ್ ಸಂಖ್ಯೆ:BLR LHR BLR TICKET BOOKING INVOICE COPY, DATED:26.03.2023
6. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ದಾವಿವಿ/ಶೈಕ್ಷಣಿಕ ವಿಭಾಗ/21/2025–26/5596, ದಿನಾಂಕ:31.03.2026.

*********

ಅಧ್ಯಕ್ಷರು, KSHEC ಇವರು ಉಲ್ಲೇಖ (1)ರ ಪತ್ರದಲ್ಲಿ ವಿಶ್ವವಿದ್ಯಾನಿಲಯದ 04 ವಿದ್ಯಾರ್ಥಿಗಳು ಹಾಗೂ 01 ಅಧಿಕಾರಿಗಳನ್ನು SCOUT INITIATIVE ಅಡಿ, (ಆಯ್ಕೆಮಾಡಿ) ಕಳುಹಿಸಿಕೊಡಲು ತಿಳಿಸಿರುತ್ತಾರೆ. ಸದರಿ ಪತ್ರದಲ್ಲಿ ವಿಶ್ವವಿದ್ಯಾನಿಲಯದಿಂದ ಆಯ್ಕೆಗೊಂಡ ವಿದ್ಯಾರ್ಥಿಗಳೂ ಹಾಗೂ ಅಧ್ಯಾಪಕರ ಪ್ರಯಾಣ ಭತ್ಯೆಯನ್ನು ಭರಿಸಲು ತಿಳಿಸಿರುತ್ತಾರೆ. ಉಲ್ಲೇಖ (2)ರ ಸಮಿತಿ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 01 ಅಧ್ಯಾಪಕರು ಮತ್ತು 04 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಉಲ್ಲೇಖ (3)ರ ನಡಾವಳಿ ಮೂಲಕ ಸಲ್ಲಿಸಿರು ಪಟ್ಟಿಯನ್ನು ಉಲ್ಲೇಖ (4)ರಲ್ಲಿ ಸದರಿ ಮಾಹಿತಿಯನ್ನು KSHEC, ಗೆ ಕಳುಹಿಸಿಕೊಡಲಾಗಿತ್ತು. ಉಲ್ಲೇಖ (5)ರಲ್ಲಿ Travelx Buddies - ಇವರು ಇ–ಮೇಲ್ ಮೂಲಕ 01 ಅಧ್ಯಾಪಕರು ಮತ್ತು 04 ವಿದ್ಯಾರ್ಥಿಗಳು ಸೇರಿ ಒಟ್ಟು ರೂ.8,06,935/– ಗಳನ್ನು ಟಿಕೇಟ್‌ಗೆ ಸಂಬಂಧ ತುರ್ತಾಗಿ ಪಾವತಿಸಲು ಕೋರಿರುತ್ತಾರೆ. ಉಲ್ಲೇಖ (6) ರಡಿ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಸದರಿಯವರಿಗೆ ಪ್ರಯಾಣ ಭತ್ಯೆ ಪಾವತಿಸಲು ಆದೇಶಿಸಲಾಗಿರುತ್ತದೆ. ಈ ಸಂಬಂಧ ಸದರಿ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

KSHEC, ಬೆಂಗಳೂರು British Council ಸಹಯೋಗದೊಂದಿಗೆ SCOUT Initiative ಅಡಿ ವಿಶ್ವವಿದ್ಯಾನಿಲಯದ ಒಬ್ಬ ಅಧ್ಯಾಪಕರು ಹಾಗೂ 04 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಿಕೊಡಬೇಕಾಗಿರುವುದರಿಂದ ಸದರಿಯವರುಗಳ ವಿಮಾನಯಾನ ವೆಚ್ಚ ರೂ.8,06,935/– ಗಳನ್ನು Travelx Buddies - ಇವರಿಗೆ ನಿಯಮಾನುಸಾರ ಪಾವತಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಸಂಶೋಧನಾ & ಅಭಿವೃದ್ಧಿ ಕೋಶ – 20 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(05/26) |

## –: ಟಿಪ್ಪಣಿ :–

ವಿಷಯಃ **ಡಾ. ರಂಗನಾಥ್ ಎಂ.ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಪಿಹೆಚ್.ಡಿ/075/2025–26/43 ದಿನಾಂಕ:02.04.2026

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಂಗನಾಥ್ ಎಂ.ಎಸ್., ಇವರು ಪಿಹೆಚ್.ಡಿ ಪದವಿಯನ್ನು ಪಡೆದುಕೊಂಡು "ಸಂಶೋಧನಾ ಮಾರ್ಗದರ್ಶಕನ್ನಾಗಿ" ಮಾನ್ಯತೆ ನೀಡುವಂತೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದಲ್ಲಿ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವ ಕುರಿತು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ **ಘಟನೋತ್ತರ** ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿಹೆಚ್.ಡಿ) ಪದವಿ ಪಡೆದಿರುವ ಡಾ. ರಂಗನಾಥ್ ಎಂ.ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಸಂಶೋಧನಾ & ಅಭಿವೃದ್ಧಿ ಕೋಶ-21 | |
|---|---|
| ವಿಷಯ ಸಂಖ್ಯೆ: | ಸಿಂ.04(b)/(05/26) |

## -: ಟಿಪ್ಪಣಿ :-

ವಿಷಯ: **ಪಿಹೆಚ್.ಡಿ. ಪದವಿಗೆ ಪ್ರವೇಶ ಪಡೆಯುವ ಪ.ಜಾ. ಹಾಗೂ ಪ.ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಿಂದ ವಿನಾಯಿತಿ ನೀಡುವ ಬಗ್ಗೆ.**

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ:ಸಕಇ 80 ಪಕವಿ 2013, ದಿನಾಂಕ:02.07.2013
2. ಕರ್ನಾಟಕ ದಲಿತ ಸಂಘರ್ಷ ಸಮಿತಿ(ರಿ). ಇವರ ಪತ್ರ ದಿನಾಂಕ:06.05.2026

*********

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ವಾರ್ಷಿಕ ಕೌಟುಂಬಿಕ ಆದಾಯ ರೂ.2,50,000 ಕ್ಕಿಂತಲೂ ಕಡಿಮೆ ಇದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಕಇ 80 ಪಕವಿ 2013 ದಿನಾಂಕ:02.07.2013ರ ಪ್ರಕಾರ ಅವರಿಗೆ ಬೋಧನಾ ಶುಲ್ಕ, ಪ್ರಯೋಗಾಲದ ಶುಲ್ಕ ಹಾಗೂ ಇತರೆ ಆಡಳಿತ ಶುಲ್ಕಗಳಿಂದ ವಿನಾಯಿತಿ ಇದೆ. ಪ.ಜಾತಿ, ಪ.ಪಂಗಡ ಹಾಗೂ ಪ್ರವರ್ಗ-1 (ವಾರ್ಷಿಕ ಆದಾಯ ರೂ.2,50,000-00 ಕ್ಕಿಂತ ಕಡಿಮೆ ಇರುವವರು) 2A,2B,3A,3B (ವಾರ್ಷಿಕ ಆದಾಯ ರೂ.1,00,000 ಕ್ಕಿಂತ ಕಡಿಮೆ ಇರುವವರು) ಇದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಹಿಂವಕ589 ಬಿಎಂಎಸ್ 2013, ದಿನಾಂಕ:05.10.2013ರ ಪ್ರಕಾರ ಅವರಿಗೆ ಬೋಧನಾ ಶುಲ್ಕ, ಪ್ರಯೋಗಾಲದ ಶುಲ್ಕ, ಲೈಬ್ರರಿ ಶುಲ್ಕ ಹಾಗೂ ಕ್ರೀಡಾ ಶುಲ್ಕದಿಂದ ವಿನಾಯಿತಿ ಇದೆ. ಮೇಲ್ಕಂಡ ಶುಲ್ಕಗಳನ್ನು ಹೊರೆತುಪಡಿಸಿ ಇತರೆ ಶುಲ್ಕಗಳನ್ನು ಪಾವತಿಸಬೇಕಾಗಿರುತ್ತದೆ.

ರಾಜ್ಯದ ಕೆಲವು ವಿಶ್ವವಿದ್ಯಾನಿಲಯಗಳು ಸದರಿ ಅಭ್ಯರ್ಥಿಗಳಿಗೆ ವಿನಾಯಿತಿ ನೀಡಿದ್ದು ದಾವಣಗೆರೆ ವಿಶ್ವವಿದ್ಯಾನಿಲಯದ 2025-26ನೇ ಸಾಲಿಗೆ ಪ್ರವೇಶ ಪಡೆದ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ವಿನಾಯಿತಿ ನೀಡುವಂತೆ ಕೋರಿ ಉಲ್ಲೇಖ(2)ರಲ್ಲಿ ಮನವಿ ಸಲ್ಲಿಸಿರುತ್ತಾರೆ ಸದರಿಯವರ ಮನವಿ ಕುರಿತು ದಿನಾಂಕ:08.05.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

### :: ನಿರ್ಣಯ ::

ಪ.ಜಾತಿ, ಪ.ಪಂಗಡ ಹಾಗೂ ಪ್ರವರ್ಗ-1 (ವಾರ್ಷಿಕ ಆದಾಯ ರೂ.2,50,000-00 ಕ್ಕಿಂತ ಕಡಿಮೆ ಇರುವವರು) 2A,2B,3A,3B (ವಾರ್ಷಿಕ ಆದಾಯ ರೂ.1,00,000 ಕ್ಕಿಂತ ಕಡಿಮೆ ಇರುವವರು) ಇದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಹಿಂವಕ589 ಬಿಎಂಎಸ್ 2013, ದಿನಾಂಕ:05.10.2013ರ ಪ್ರಕಾರ 2025-26ನೇ ಸಾಲಿಗೆ ಪ್ರವೇಶ ಪಡೆದ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲದ ಶುಲ್ಕ, ಲೈಬ್ರರಿ ಶುಲ್ಕ ಹಾಗೂ ಕ್ರೀಡಾ ಶುಲ್ಕದಿಂದ ವಿನಾಯಿತಿ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(05/26) |

# –: ಟಿಪ್ಪಣಿ :–

**ವಿಷಯ: 2026–27ನೇ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ಮಾಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.04.2026

*********

ವಿಶ್ವವಿದ್ಯಾನಿಲಯದಲ್ಲಿ 2024–25ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ವಿವಿಧ ಪರೀಕ್ಷಾ ಶುಲ್ಕಗಳನ್ನು 2026–27ನೇ ಶೈಕ್ಷಣಿಕ ಸಾಲಿನಿಂದ 10%ರಷ್ಟು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಪಟ್ಟಿ ಮಾಡಲಾಗಿರುವಂತೆ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಸಂಬಂಧ, ಈ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## <u>ಅನುಬಂಧ–1 A</u>

**2026-27ನೇ ಸಾಲಿಗೆ ಪರೀಕ್ಷಾ ಶುಲ್ಕ ಪರಿಷ್ಕರಣೆ ವಿವರಗಳು**

| Graduate Courses | | | | | | | | | | | | | |
|---|---|---|---|---|---|---|---|---|---|---|---|---|---|
| Sl. No. | Particulars | 2024–25ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | 2026–27ನೇ ಸಾಲಿಗೆ ೧೦%ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | |
| | | BA | B.Sc | B.Com | BBA/ BCA/ BSW | B.Ed. | B.P.Ed | BA | B.Sc | B.Com | BBA/ BCA/ BSW | B.Ed. | B.P.Ed. |
| 1 | Application Fee | 110 | 110 | 110 | 110 | 110 | 110 | 120 | 120 | 120 | 120 | 120 | 120 |
| 2 | Marks Card Fee (Per Semester) | 204 | 204 | 204 | 204 | 264 | 226 | 225 | 225 | 225 | 225 | 290 | 250 |
| 3 | I to VI Semester Whole Exam (per semester) | 622 | 787 | 677 | 1051 | 1166 | 1271 | 685 | 865 | 745 | 1155 | 1285 | 1400 |
| 4 | Per Paper Theory (Reapter) | 187 | 187 | 187 | 220 | 242 | 264 | 205 | 205 | 205 | 245 | 270 | 290 |
| 5 | Per Practical (Reapter) | 143 | 143 | 0 | 143 | 0 | 171 | 160 | 160 | * | 160 | 0 | 190 |
| 6 | Practical (B.Ed. IV Semester) | * | * | * | * | 550 | * | * | * | * | * | 605 | * |
| 7 | Practical (Reapter) (B.Ed. IV Semester) | * | * | * | * | 363 | * | * | * | * | * | 400 | * |

## <u>ಅನುಬಂಧ–1 B</u>

| 2024–25ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | 2026–27ನೇ ಸಾಲಿಗೆ 10% ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | |
|---|---|---|---|---|---|---|---|
| Post-Graduate Courses | | | | | | | |
| **Sl. No.** | **Particulars** | **Chemistry / M.Ed. / M.P.Ed.** | **MA/ M.Sc.,/ M.Com/ MSW** | **MBA/ MCA/ MVA** | **Chemistry/ M.Ed./ M.P.Ed.** | **MA/ M.Sc.,/ M.Com/ MSW** | **MBA/ MCA/ MVA** |
| 1 | Application Fee | 110 | 110 | 110 | 120 | 120 | 120 |
| 2 | Marks Card Fee (Per Semester) | 204 | 204 | 204 | 225 | 225 | 225 |
| 3 | I to IV Semester Whole Exam (per semester) | 2107 | 1865 | 2107 | 2320 | 2050 | 2320 |
| 4 | Per Paper Theory (Reapter) | 413 | 413 | 413 | 455 | 455 | 455 |
| 5 | Per Practical (Reapter) | 413 | 413 | 413 | 455 | 455 | 455 |

ಕುಲಸಚಿವರು

ಕುಲಪತಿಗಳು

## ಅನುಬಂಧ-1 C

| | | 2024-25ನೇ ಸಾಲಿನಲ್ಲಿರುವ ವಿವಿಧ ಪರೀಕ್ಷಾ ಶುಲ್ಕ | | | | | | | 2026-27ನೇ ಸಾಲಿಗೆ 10%ರಷ್ಟು ಪರಿಷ್ಕರಿಸಬೇಕಾಗಿರುವ ಶುಲ್ಕ | | | | | | |
|---|---|---|---|---|---|---|---|---|---|---|---|---|---|---|
| Sl. No. | Particulars | BA | B.Sc. | B.Com. | BBA/ BCA/ BSW | B.Ed. | B.P.Ed. | PG | BA | B.Sc. | B.Com. | BBA/ BCA/ BSW | B.Ed. | B.P.Ed | PG |
| 1 | Paper Seeing / Photo Copy | 866 | 866 | 866 | 866 | 968 | * | * | 955 | 955 | 955 | 955 | 1065 | * | * |
| 2 | Retotaling | 266 | 266 | 266 | 370 | 363 | * | * | 295 | 295 | 295 | 410 | 400 | * | * |
| 3 | Revaluation | 370 | 370 | 370 | 532 | 787 | * | * | 410 | 410 | 410 | 585 | 865 | * | * |
| 4 | Challenge Valuation (per paper) | * | * | * | * | * | * | 2420 | * | * | * | * | * | * | 2660 |

## ಅನುಬಂಧ-1 D

### Fee Structure for Various Certificates of Ph.D

| Sl. No. | Particulars | Existing Fees (2023-24) | Proposed Fees 2026-27 (10% Increase) |
|---|---|---|---|
| 1 | Thesis Submission | 1000=00 | 1100=00 |
| 2 | Correction of Marks Card | 500=00 | 550=00 |
| 3 | Duplicate Marks Card | 2000=00 | 2200=00 |
| 4 | Correction of Convocation | 1000=00 | 1100=00 |
| 5 | Duplicate Convocation | 2000=00 | 2200=00 |
| 6 | Genuine Certificate (Verification) Govt. & Private Sector | 2000=00 | 2200=00 |

## ಅನುಬಂಧ-2

**Examination Section Fee Structure for-2024-25**
**Effect from 01-01-2025**

| | Particulars | UG | PG | Searching fee / Correction Fees |
|---|---|---|---|---|
| 1 | Correction marks Cards | BA, B.Sc. B.Com, BBA, BCA, BSW, BVA -204/- Professional course B.Ed. -264/-,BP.Ed.-226/- Each Marks Card Fees | 204/- (Each Marks Card Fees) | 385/- One or All Marks Card |
| 2 | Duplicate Marks Card | 425/- (Each Marks Card Fees) | 425/- (Each Marks Card Fess) | ----- |
| 3 | Convocation Fees | GM – 970/- SC,ST,C-I -790/- | GM -1490/- SC,ST,C-I -935/- Ph.D. / M.Phil. GM -2810/- SC,ST,C-I -2465/- | 120/- (Per Year) |
| 4 | Correction of Convocation Fees | 605/- | 605/- | ----- |
| 5 | Duplicate Convocation | Double the Convocation Fees | Double the Convocation Fees | ----- |
| 6 | PPC Fees | 424/- | 424/- | ----- |

**Examination Section Fee Structure for-2026-27 (10% Increase)**

| Sl. No | Particulars | UG | PG | Searching fee / Correction Fees |
|---|---|---|---|---|
| 1 | Correction marks Cards | BA, B.Sc. B.Com, BBA, BCA, BSW, BVA -225/- Professional course B.Ed. -264/-,BP.Ed.-250/- Each Marks Card Fees | 225/- (Each Marks Card Fees) | 425/- One or All Marks Card |
| 2 | Duplicate Marks Card | 470/- (Each Marks Card Fees) | 470/- (Each Marks Card Fess) | ----- |
| 3 | Convocation Fees | GM – 1070/- SC,ST,C-I -870/- | GM -1640/- SC,ST,C-I -1030/- Ph.D. / M.Phil. GM -2810/- SC,ST,C-I -2465/- | 135/- (Per Year) |
| 4 | Correction of Convocation Fees | 665/- | 665/- | ----- |
| 5 | Duplicate Convocation | Double the Convocation Fees | Double the Convocation Fees | ----- |
| 6 | PPC Fees | 470/- | 470/- | ----- |

ಕುಲಸಚಿವರು

ಕುಲಪತಿಗಳು

| | | | | |
|---|---|---|---|---|
| 7 | NCL Fees | 425/- | 425/- | ----- |
| 8 | Genuine Certificate fees( Verification ) | 1610/- ( Govt. & Private Sector ) | 1610/- ( Govt. & Private Sector ) | ----- |
| 9 | Transcript Fees | (605/- Each Marks Card Fees) 605 x 6= 3630/- | 605/- Each Marks Card Fees) 605 x 4= 2420/- | ----- |
| 10 | Attestation of Each Document from the Concerned officers | 255/- | 255/- | ----- |

| | | | | |
|---|---|---|---|---|
| 7 | NCL Fees | 470/- | 470/- | ----- |
| 8 | Genuine Certificate fees( Verification ) | 1770/- ( Govt. & Private Sector ) | 1770/- ( Govt. & Private Sector ) | ----- |
| 9 | Transcript Fees | (665/- Each Marks Card Fees) 665 x 6= 3990/- | 665/- Each Marks Card Fees) 605 x 4= 2660/- | ----- |
| 10 | Attestation of Each Document from the Concerned officers | 280/- | 280/- | ----- |

:: ನಿರ್ಣಯ ::

2024–25ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ನಿಗಧಿಪಡಿಸಲಾಗಿರುವ ಈ ಮೇಲ್ಕಂಡ ವಿವಿಧ ಪರೀಕ್ಷಾ ಶುಲ್ಕಗಳನ್ನು 2026–27ನೇ ಶೈಕ್ಷಣಿಕ ಸಾಲಿನಿಂದ 10% ರಷ್ಟು ಹೆಚ್ಚಿಸಿ ಪರಿಷ್ಕರಣೆ ಮಾಡಿರುವ ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಪರೀಕ್ಷಾ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 23 | |
| --- | --- |
| ವಿಷಯ ಸಂಖ್ಯೆ: | ಸಿಂ.05(b)/(05/26) |

## –: ಟಿಪ್ಪಣಿ :–

ವಿಷಯಃ **Double the Duration ಅವಧಿ ಪೂರ್ಣಗೊಂಡಿರುವ CBCS/Non CBCS ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆ ನಡೆಸಲು ಅನುಮತಿ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.04.2026

*********

2009–10ನೇ ಸಾಲಿನಿಂದ CBCS/Non CBCS ಸ್ಕೀಂ ಅಡಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಕೋರಿ ಮನವಿ ಸಲ್ಲಿಸಿರುವ ಪ್ರಯುಕ್ತ ವಿದ್ಯಾರ್ಥಿಗಳ ಉದ್ಯೋಗ/ಭವಿಷ್ಯದ ಹಿತದೃಷ್ಠಿಯಿಂದ 2009–10ನೇ ಸಾಲಿನಿಂದ Double the Duration ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಮುಂಬರುವ ಜುಲೈ–2026ರ ಮಾಹೆಯಲ್ಲಿ ಅವಕಾಶ ನೀಡಿ ಪರೀಕ್ಷೆ ನಡೆಸುವ ಸಂಬಂಧ ಈ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

2009–10ನೇ ಸಾಲಿನಿಂದ CBCS/Non CBCS ಸ್ಕೀಂ ಅಡಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಉದ್ಯೋಗ/ಭವಿಷ್ಯದ ಹಿತದೃಷ್ಠಿಯಿಂದ Double the Duration ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಮುಂಬರುವ ಜುಲೈ–2026ರ ಮಾಹೆಯಲ್ಲಿ ಪರೀಕ್ಷೆ ಬರೆಯಲು "ಇದೊಂದು ಬಾರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ" ಪರೀಕ್ಷೆ ನಡೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಸದರಿ ವಿಷಯವನ್ನು ದಿನಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಪ್ರಕಟಣೆ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.05(c)/(05/26) |

## –: ಟಿಪ್ಪಣಿ :–

**ವಿಷಯಃ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು– ಈ ಸಂಸ್ಥೆಯಿಂದ ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸುವ ಕುರಿತು.**

ಉಲ್ಲೇಖಃ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ05.05.2026

*********

2024–25ನೇ ಮತ್ತು 2025–26ನೇ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣರಾಗಿರುವ ಸ್ನಾತಕ, ಬಿ.ಇಡಿ., ಬಿ.ಪಿ.ಇಡಿ., ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ತುರ್ತಾಗಿ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ವಿತರಿಸಬೇಕಾಗಿರುತ್ತದೆ.

ಉತ್ತೀರ್ಣಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಸುಮಾರು ಮೂವತ್ತು ಸಾವಿರ ಖಾಲಿ ಪದವಿ ಪ್ರಮಾಣ ಪತ್ರಗಳ ಅವಶ್ಯಕತೆ ಇರುತ್ತವೆ. ಈಗಾಗಲೇ, ವ್ಯಾಸಂಗ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ, ವಿದ್ಯಾರ್ಥಿ ವೇತನ, ನಗದು ಬಹುಮಾನ ಹಾಗೂ ವಿದೇಶ ವ್ಯಾಸಂಗಕ್ಕಾಗಿ ಪದವಿ ಪ್ರಮಾಣ ಪತ್ರಗಳನ್ನು ಕೇಳುತ್ತಿದ್ದಾರೆ. ಪ್ರಯುಕ್ತ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು ಇವರಿಂದ 30,000 ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ತಗಲಬಹುದಾದ ಅಂದಾಜು ವೆಚ್ಚ ರೂ.20,00,000=00ಗಳ ಮಿತಿಯೊಳಗೆ ಖರೀದಿಸಿ ಹಾಗೂ ಸಾಮಾಗ್ರಿಯನ್ನು ಖರೀದಿಸಿದ ನಂತರ ಸಂಬಂಧಿಸಿದ ಸಂಸ್ಥೆಯವರಿಗೆ ಹಣ ಪಾವತಿ ಮಾಡಲು ಕೋರಿದೆ.

ಆದುದರಿಂದ, 4G ವಿನಾಯಿತಿ ಹೊಂದಿದ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು– ಈ ಸಂಸ್ಥೆಯಿಂದ ಮೂವತ್ತು ಸಾವಿರ ಖಾಲಿ ಪದವಿ ಪ್ರಮಾಣ ಪತ್ರಗಳ ಖರೀದಿಸುವ ಸಂಬಂಧ, ಈ ವಿಷಯವನ್ನು ದಿನಾಂಕ:08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಅವಶ್ಯವಿರುವ 30,000 ಖಾಲಿ ಪದವಿ ಪ್ರಮಾಣ ಪತ್ರಗಳನ್ನು ಅಂದಾಜು ವೆಚ್ಚ ರೂ.20,00,000=00 ಗಳ ಮಿತಿಯೊಳಗೆ 4G ವಿನಾಯಿತಿ ಹೊಂದಿದ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು– ಈ ಸಂಸ್ಥೆಯಿಂದ ನಿಯಮಾನುಸಾರ ಖರೀದಿಸಲು ಹಾಗೂ ಖರೀದಿಸಿದ ನಂತರ ಸದರಿ ಸಂಸ್ಥೆಯವರಿಗೆ ನಿಯಮಾನುಸಾರ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು  ಕುಲಪತಿಗಳು

| ಪರೀಕ್ಷಾಂಗ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.05(d)/(05/26) |

# –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಯಲದ ಪರೀಕ್ಷಾಂಗ ವಿಭಾಗಕ್ಕೆ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರಗಳನ್ನು ಖರೀದಿಸುವ ಬಗ್ಗೆ.**

ಉಲ್ಲೇಖಃ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ05.05.2026

*********

2025–26ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಪೂರೈಸಿ ಉತ್ತೀರ್ಣರಾಗುವ ಸ್ನಾತಕ, ಬಿ.ಇಡಿ., ಬಿ.ಪಿ.ಇಡಿ., ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕಾಗಿ, ವಿದ್ಯಾರ್ಥಿ ವೇತನ, ನಗದು ಬಹುಮಾನ, ವಿದೇಶ ವ್ಯಾಸಂಗಕ್ಕಾಗಿ, ಉದ್ಯೋಗಕ್ಕಾಗಿ, ಮತ್ತು ಇನ್ನಿತರೆ ಉದ್ದೇಶಗಳಿಗಾಗಿ ಅರ್ಜಿ ಸಲ್ಲಿಸ ಬಯಸುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗಿರುತ್ತದೆ. ಈ ಸಂಬಂಧವಾಗಿ ಸುಮಾರು 20,000 (ಇಪ್ಪತ್ತು ಸಾವಿರ) ಖಾಲಿ (Blank) ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರಗಳ (PPC) ಅವಶ್ಯಕತೆ ಇರುತ್ತವೆ.

ಆದುದರಿಂದ, ಸ್ನಾತಕ/ಸ್ನಾತಕೋತ್ತರ ಪದವಿ ವ್ಯಾಸಂಗ ಪೂರೈಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರಗಳನ್ನು ವಿತರಿಸಲು ತಗಲಬಹುದಾದ ಅಂದಾಜು ವೆಚ್ಚ ರೂ.5,00,000=00ಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಖರೀದಿಸಲು ಅನುಮತಿಗಾಗಿ ಹಾಗೂ ಸಾಮಾಗ್ರಿಯನ್ನು ಖರೀದಿಸಿದ ನಂತರ ಸರಬರಾಜುದಾರರಿಗೆ ಹಣ ಪಾವತಿ ಮಾಡುವ ಬಗ್ಗೆ ದಿನಾಂಕ:08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಅವಶ್ಯವಿರುವ 20,000 ಖಾಲಿ (Blank) ತಾತ್ಕಾಲಿಕ ಉತ್ತೀರ್ಣ (PPC) ಪ್ರಮಾಣ ಪತ್ರಗಳನ್ನು ಅಂದಾಜು ವೆಚ್ಚ ರೂ.5,00,000=00 ಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ಹಾಗೂ ಖರೀದಿಸಿದ ನಂತರ ಸದರಿ ಸಂಸ್ಥೆಯವರಿಗೆ ನಿಯಮಾನುಸಾರ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(05/26) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ & ಸಮಾಜ ವಿಜ್ಞಾನ ಕಟ್ಟಡದ ಮಧ್ಯದಲ್ಲಿ ಸಿ.ಸಿ.ರಸ್ತೆ (C.C.Road) ನಿರ್ಮಾಣ ಕಾಮಗಾರಿ ಕುರಿತು.**

ಉಲ್ಲೇಖ:
1. ಸಿಂಡಿಕೇಟ್ ಅನುಮೋದನೆ ದಿನಾಂಕ:30.11.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.12.2025
3. ಸಂಖ್ಯೆ:ದಾವಿವಿ/ಇಂಜಿ/ಕಾಪಾಅ/18/2025–26/271 ದಿ:05.03.2026
4. ಸಂಖ್ಯೆ:KSHC/2025-26/2556, ಸ್ವೀಕೃತ ದಿನಾಂಕ:25.03.2026
5. ಸಂಖ್ಯೆ:ದಾವಿವಿ/ಇಂಜಿ/ಕಾಪಾಅ/18/2025–26/302 ದಿ:25.03.2026

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ & ಸಮಾಜ ವಿಜ್ಞಾನ ಕಟ್ಟಡದ ಮಧ್ಯದಲ್ಲಿ ಸಿ.ಸಿ.ರಸ್ತೆ (C.C.Road) ನಿರ್ಮಾಣ ಕಾಮಗಾರಿ ಸಂಬಂಧಿಸಿದಂತೆ ಉಲ್ಲೇಖ (1 ಮತ್ತು 2) ರಲ್ಲಿ ಅನುಮೋದನೆಯನ್ನು ಪಡೆದು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್, ಬೆಂಗಳೂರು ಇವರಿಗೆ ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಉಲ್ಲೇಖ (03 ರಿಂದ 05)ರಲ್ಲಿ ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್, ಬೆಂಗಳೂರು ಇವರೊಂದಿಗೆ ಪತ್ರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆ ಹಾಗೂ 50% ಮೊತ್ತದ ಅನುದಾನ ಬಿಡುಗಡೆಮಾಡಬೇಕಾಗಿರುತ್ತದೆ.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ದಿನಾಂಕ:30.11.2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಸದರಿ ಅನುಮೋದನೆಯು 2024–25ನೇ ಆರ್ಥಿಕ ಸಾಲಿನದ್ದಾಗಿರುವುದರಿಂದ ಪುನರ್ ಅನುಮೋದನೆ ಪಡೆಯಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Construction of CC Road at Davangere University, Shivagangotri, Tolahunase, Davanagere Dist. | 12.00 |

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ & ಸಮಾಜ ವಿಜ್ಞಾನ ಕಟ್ಟಡದ ಮಧ್ಯದಲ್ಲಿ ಸಿ.ಸಿ.ರಸ್ತೆ (C.C.Road) ನಿರ್ಮಾಣ ಕಾಮಗಾರಿಯನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಮೂಲಕ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 27 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(05/26) |

## –: ಟಿಪ್ಪಣಿ :–

ವಿಷಯಃ **ಗ್ರಂಥಾಯಲಕ್ಕೆ RFID Installation ಮಾಡಲು Network ಸೌಲಭ್ಯ ಕಲ್ಪಿಸುವ ಕುರಿತು.**

ಉಲ್ಲೇಖ: ಸಂಖ್ಯೆ:ದಾವಿವಿ/ಗ್ರ/2025–26/140 ದಿನಾಂಕ:04.04.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಂಥಾಯಲಕ್ಕೆ RFID Installation ಮಾಡಲು Network ಅವಶ್ಯಕತೆ ಇದ್ದು, Network ಸೌಲಭ್ಯ ಒದಗಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಅದರ ಅಂದಾಜು ವೆಚ್ಚ ರೂ.1.50 ಲಕ್ಷ ಆಗುತ್ತಿದ್ದು, ಅದನ್ನು ದರಪಟ್ಟಿ ಆಧಾರದ ಮೇಲೆ ಕೈಗೊಂಡಿದ್ದು ಅವರಿಗೆ ರೂ.1.50 ಲಕ್ಷ ಪಾವತಿಸಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Providing network facilities for RFID installation in the library at Davangere University, Shivagangotri. | 1.50 |

**ವಿವರಣೆ**

- ಶ್ರೀ ದಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – RFID Installation ಮಾಡುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಗ್ರಂಥಾಯಲಕ್ಕೆ RFID Installation ಮಾಡಲು Network ಸೌಲಭ್ಯವನ್ನು ದರಪಟ್ಟಿ ಆದಾರದ ಮೇಲೆ ಕೈಗೊಂಡಿದ್ದು, ಸದರಿ ಕಾಮಗಾರಿ ವೆಚ್ಚ ರೂ.1.50 ಲಕ್ಷಗಳನ್ನು ಸಂಬಂಧಪಟ್ಟ ಸಂಸ್ಥೆಯವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 28 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(05/26) |

## –: ಟಿಪ್ಪಣಿ :–

ವಿಷಯಃ **ಗ್ರಂಥಾಯಲಕ್ಕೆ ಹಾಳಾಗಿರುವ 2'X2' CFL Surface mount light ಗಳನ್ನು ಬದಲಾಯಿಸಿ ಹೊಸದಾಗಿ 2'X2' LED surface mount light ಗಳನ್ನು ಅಳವಡಿಸುವ ಕುರಿತು.**

ಉಲ್ಲೇಖ: ಸಂಖ್ಯೆ:ದಾವಿವಿ/ಗ್ರ/2025–26/145 ದಿನಾಂಕ:13.04.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಂಥಾಯಲಯದಲ್ಲಿನ Reading Hallನಲ್ಲಿರುವ 2'X2' CFL Surface mount lightಗಳು 10 ವರ್ಷಗಳಷ್ಟು ಹಳೆಯದಾಗಿದ್ದು, ಸಂಪೂರ್ಣವಾಗಿ ಹಾಳಾಗಿರುತ್ತವೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ/ ಸಂಶೋಧನಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗಿದ್ದು, ಅವುಗಳನ್ನು ಬದಲಿಸಿ ಹೊಸದಾಗಿ ಅಳವಡಿಸಿಕೊಡುವಂತೆ ಉಲ್ಲೇಖಿತ ಪತ್ರದಲ್ಲಿ ಗ್ರಂಥಪಾಲಕರು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಿದಾಗ ಒಟ್ಟು 86 ಸಂಖ್ಯೆ CFL light ಗಳು ಹಾಳಾಗಿದ್ದು ಹೊಸದಾಗಿ ರೂ.5.00ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Replacement of damaged 2'X2' CFL Surface-mounted lights and install new 2'X2' LED surface-mounted lights in the library at Davangere University. | 5.00 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ಗ್ರಂಥಾಯಲಯದ Reading Hall ಗೆ ಅವಶ್ಯವಿರುವ ಒಟ್ಟು 86 ಸಂಖ್ಯೆ CFL light ಗಳನ್ನು ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 29 | |
|---|---|
| ವಿಷಯ ಸಂಖ್ಯೆ: | ಸಿಂ.06(d)/(05/26) |

# –: ಟಿಪ್ಪಣಿ :–

ವಿಷಯಃ **ವಿಜ್ಞಾನ ಕಟ್ಟಡದ ಸಭಾಂಗಣಕ್ಕೆ Sound system ಅಳವಡಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜ್ಞಾನ ಕಟ್ಟಡದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಕವಿಜ್ಞಾನ, ಎಂ.ಸಿ.ಎ. ವಿಭಾಗ, ಆಹಾರ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಭಾಗಗಳು ಇದ್ದು, ಆ ವಿಭಾಗಗಳ ಸಭೆ, ಸಮಾರಂಭ, Conference ಗಳಿಗೆ, ವಿಜ್ಞಾನ ಸಭಾಂಗಣವನ್ನು ಉಪಯೋಗಿಸುತ್ತಿದ್ದು, ಸಭಾಂಗಣದಲ್ಲಿ Sound system ಇರುವುದಿಲ್ಲ. ಅವುಗಳನ್ನು ಸಂಬಂಧಪಟ್ಟ ವಿಭಾಗದವರು ಬಾಡಿಗೆ ಆಧಾರದ ಮೇಲೆ ಹೊರಗಡೆಯಿಂದ ತರುತ್ತಿರುತ್ತಾರೆ. ಆದ್ದರಿಂದ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಖರೀದಿಸಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Supply and Installation of a sound system in the Science Building Auditorium Hall at Davangere University. | 5.00 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿಜ್ಞಾನ ಕಟ್ಟಡದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಕವಿಜ್ಞಾನ, ಎಂ.ಸಿ.ಎ., ಆಹಾರ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇನ್ನಿತರೆ ವಿಭಾಗಗಳ ಸಭೆ, ಸಮಾರಂಭ, Conference ಗಳನ್ನು ನಡೆಸಲು ವಿಜ್ಞಾನ ಸಭಾಂಗಣಕ್ಕೆ Sound System ಅವಶ್ಯಕತೆಯಿದ್ದು ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 30 | |
|---|---|
| ವಿಷಯ ಸಂಖ್ಯೆ: | ಸಿಂ.06(e)/(05/26) |

# –: ಟಿಪ್ಪಣಿ :–

**ವಿಷಯಃ** ವಿಜ್ಞಾನ ಕಟ್ಟಡದ ಸಭಾಂಗಣಕ್ಕೆ **UPS and Battery** ಗಳನ್ನು ಖರೀದಿಸುವ ಕುರಿತು.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜ್ಞಾನ ಸಭಾಂಗಣದಲ್ಲಿ ವಿದ್ಯುತ್ ಅಡೆತಡೆಯಾದಾಗ ತೊಂದರೆ ಆಗುತ್ತಿದ್ದು ದರಪಟ್ಟಿ ಆಧಾರದ ಮೇಲೆ 5KVA ಸಾಮರ್ಥ್ಯದ UPS ಮತ್ತು Batteryಗಳನ್ನು ದರಪಟ್ಟಿ ಆಧಾರದ ಮೇಲೆ ಖರೀದಿಸಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Purchase of UPS and batteries for the Science Building Auditorium at Davangere University. | 4.80 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿಜ್ಞಾನ ಸಭಾಂಗಣದಲ್ಲಿ ವಿದ್ಯುತ್ ಅಡೆತಡೆಯಾದಾಗ ಸಭೆ ಸಮಾರಂಭಗಳನ್ನು ನಡೆಸಲು ಸಲುವಾಗಿ ರೂ.4.80 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ 5 KVA ಸಾಮರ್ಥ್ಯದ UPS ಮತ್ತು Battery ಗಳನ್ನು ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 31 | |
|---|---|
| ವಿಷಯ ಸಂಖ್ಯೆ: | ಸಿಂ.06(f)/(05/26) |

# –ಃ ಟಿಪ್ಪಣಿ ಃ–

**ವಿಷಯಃ ಪರೀಕ್ಷಾಂಗ ವಿಭಾಗಕ್ಕೆ ಹವಾನಿಯಂತ್ರಕಗಳನ್ನು ಸರಬರಾಜು ಮಾಡುವ ಬಗ್ಗೆ.**

ಉಲ್ಲೇಖ: ಸಂಖ್ಯೆ:ದಾವಿವಿ:ಪವಿ:ಲೆಪ:2025–26/21 ದಿನಾಂಕ:02.04.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪರೀಕ್ಷಾಂಗ ವಿಭಾಗದ Marks Card Printing Machine ಹಾಗೂ Computer Center Room ಗೆ ಹವಾನಿಯಂತ್ರಕಗಳನ್ನು ಅತಿ ಅವಶ್ಯಕವಿರುವುದರಿಂದ ಖರೀದಿಸಿ ಅಳವಡಿಸಿಕೊಡುವಂತೆ ಕುಲಸಚಿವರು (ಪರೀಕ್ಷಾಂಗ) ಇವರು ಕೋರಿದ್ದು, ದರಪಟ್ಟಿ ಆಧಾರದ ಮೇಲೆ ಅಂದಾಜು ರೂ. 3.00 ಲಕ್ಷದೊಳಗೆ ಖರೀದಿಸಲು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Supply of air conditioners to the Examination Section at Davangere University. | 3.00 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಅಂಕಪಟ್ಟಿ ಮುದ್ರಣ ಕೊಠಡಿ (Marks Card Printing Machine Room) ಹಾಗೂ ಗಣಕಯಂತ್ರ ಕೊಠಡಿಗೆ (Computer Center Room) ಹವಾನಿಯಂತ್ರಕಗಳನ್ನು ಅಳವಡಿಸುವುದು ಅತಿ ಅವಶ್ಯಕವಿರುವುದರಿಂದ ರೂ.3.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ 1.5 ಟನ್ ಹವಾನಿಯಂತ್ರಕ (Air Conditioners) ಗಳನ್ನು ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 32 | |
|---|---|
| ವಿಷಯ ಸಂಖ್ಯೆ: | ಸಿಂ.06(g)/(05/26) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದ ವಿದ್ಯುತ್ Load ನ್ನು 400KVA ರಿಂದ 250 KVA ವರೆಗೆ reduce ಮಾಡುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯಕ್ಕೆ BESCOM ನಿಂದ ಮಂಜೂರಾದ ಅಧಿಕೃತ ವಿದ್ಯುತ್ load ನ್ನು 400 KVA ರಿಂದ 250 KVA ವರೆಗೆ ಕಡಿಮೆ ಮಾಡಲು ದಿನಾಂಕ:30.12.2025 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ 1.62 ಲಕ್ಷಗಳ ಮಿತಿಯೊಳಗೆ ಕಾಮಗಾರಿ ಕೈಗೊಳ್ಳಲು ಅನುಮತಿ ಪಡೆಯಲಾಗಿತ್ತು.

ನಂತರದಲ್ಲಿ PT Coil ಕೂಡ ಹಾಳಾಗಿರುವುದರಿಂದ ಅವುಗಳನ್ನು ಅಳವಡಿಸಲು ಈಗಾಗಲೇ ದರಪಟ್ಟಿ ಕರೆದಿದ್ದು, ಕನಿಷ್ಟ ಮೊತ್ತ ನಮೂದಿಸಿದವರಿಗೆ ಕಾರ್ಯಾದೇಶ ನೀಡಲಾಗಿದ್ದು ರೂ.2.52 ಲಕ್ಷಗಳನ್ನು ಪಾವತಿಗಾಗಿ ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Reduction of the University's electrical load from 400 KVA to 250 KVA. | 2.50 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿದ್ಯುತ್ ಘಟಕದಲ್ಲಿ PT Coil ಹಾಳಾಗಿರುವುದರಿಂದ ರೂ.2.50 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಹೊಸ PT Coil ಅಳವಡಿಸಲು ಕಾಮಗಾರಿಯನ್ನು ಕೈಗೊಂಡಿದ್ದು, ಸಂಬಂಧಿಸಿದ ಸಂಸ್ಥೆಯವರಿಗೆ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 33 | |
|---|---|
| ವಿಷಯ ಸಂಖ್ಯೆ: | ಸಿಂ.06(h)/(05/26) |

# –: ಟಿಪ್ಪಣಿ :–

ವಿಷಯಃ ದೃಶ್ಯಕಲಾ ಮಹಾವಿದ್ಯಾಲಯಕ್ಕೆ CCTVಗಳನ್ನು ಅಳವಡಿಸುವ ಕುರಿತು.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯಕ್ಕೆ CCTV ಅಳವಡಿಸುವ ಸಂಬಂಧ ದಿನಾಂಕ:30.12.2025 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ರೂ.1.90 ಲಕ್ಷಕ್ಕೆ ಅನುಮತಿ ಪಡೆಯಲಾಗಿತ್ತು. ಆದರೆ, ಹೆಚ್ಚುವರಿಯಾಗಿ Cable ಮತ್ತು DVR Point ಗಳನ್ನು ಅಳವಡಿಸಲು ದರಪಟ್ಟಿ ಕರೆದಿದ್ದು, ಕನಿಷ್ಟ ಮೊತ್ತ ನಮೂದಿಸಿದವರಿಗೆ ಕಾರ್ಯಾದೇಶ ನೀಡಲಾಗಿದ್ದು ರೂ.2.95 ಲಕ್ಷಗಳನ್ನು ಪಾವತಿಗಾಗಿ ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Installation of CCTV at the College of Visual Arts, Davangere University. | 2.95 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯಕ್ಕೆ CCTV ಅಳವಡಿಸುವ ಸಂಬಂಧ ಹೆಚ್ಚುವರಿಯಾಗಿ Cable ಮತ್ತು DVR Point ಗಳನ್ನು ಅಳವಡಿಸಲು ರೂ.2.95 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 34 | |
|---|---|
| ವಿಷಯ ಸಂಖ್ಯೆ: | ಸಿಂ.06(i)/(05/26) |

## –: ಟಿಪ್ಪಣಿ :–

ವಿಷಯಃ **ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಗೆ ಹೊಸದಾಗಿ Flooring Tiles ಗಳನ್ನು ಅಳವಡಿಸಿರುವ ಬಗ್ಗೆ.**

ಉಲ್ಲೇಖ: ಸಂಖ್ಯೆ:ವಿದೃಕಮ/ಅಭಿವೃದ್ಧಿ/2025–26/17 ದಿನಾಂಕ:17.04.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಯ ನೆಲಹಾಸುಗಳು ಬಿಸಿಲಿನ ತಾಪಮಾನದಿಂದಾಗಿ ಸಂಪೂರ್ಣವಾಗಿ ಒಡೆದುಹೋಗಿರುತ್ತದೆ. ಇದರಿಂದಾಗಿ ಪ್ರಾಚಾರ್ಯರ ಕೊಠಡಿಯನ್ನು ಉಪಯೋಗಿಸಲು ಬಾರದಂತಾಗಿದ್ದು ಹೊಸದಾಗಿ tiles ಗಳನ್ನು ಅಳವಡಿಸುವಂತೆ ಉಲ್ಲೇಖಿತ ಪತ್ರದಲ್ಲಿ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ ಇವರು ಕೋರಿರುತ್ತಾರೆ. ಆದ್ದರಿಂದ, ದರಪಟ್ಟಿ ಆಧಾರದ ಮೇಲೆ ಕೆಲಸವನ್ನು ಕೈಗೊಂಡಿದ್ದು ಅದರ ಅಂದಾಜು ಮೊತ್ತ ರೂ.1.40 ಲಕ್ಷಗಳು ಆಗಿದ್ದು ಕೆಲಸ ನಿರ್ವಹಿಸಿದ ಸಂಸ್ಥೆಗೆ ರೂ.1.40 ಲಕ್ಷಗಳನ್ನು ಪಾವತಿ ಮಾಡಲು ದಿನಾಂಕಃ08.05.2026 ರಂದು ಏರ್ಪಡಿಸಿರುವ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| **Sl. No.** | **Name of the Work** | **Amount Rs. (in Lakhs)** |
|---|---|---|
| 1. | Removing damaged tiles, providing and fixing new polished glazed vitrified tiles to Fine Arts College, Principal Chamber | 1.40 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಗೆ ಹೊಸದಾಗಿ ಟೈಲ್ಸ್ (Tiles) ಗಳನ್ನು ಅಂದಾಜು ಮೊತ್ತ ರೂ.1.40 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೆಲಸವನ್ನು ಕೈಗೊಂಡಿದ್ದು, ಕೆಲಸ ನಿರ್ವಹಿಸಿದ ಸಂಸ್ಥೆಗೆ ನಿಯಮಾನುಸಾರ ರೂ.1.40 ಲಕ್ಷಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ -35 | |
|---|---|
| ವಿಷಯ ಸಂಖ್ಯೆ: | ಸಿಂ.06(j)/(05/26) |

## -: ಟಿಪ್ಪಣಿ :-

**ವಿಷಯಃ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಯ ಮೇಲ್ಛಾವಣಿಗೆ Water Proof ಮಾಡಿಸುವ ಬಗ್ಗೆ.**

ಉಲ್ಲೇಖ: ಸಂಖ್ಯೆ:ವಿದೃಕಮ/ಅಭಿವೃದ್ಧಿ/2025-26/17 ದಿನಾಂಕ:17.04.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಯ ಮೇಲ್ಛಾವಣಿಯು ಸಂಪೂರ್ಣವಾಗಿ ಶಿಥಿಲಗೊಂಡು ಮೇಲ್ಭಾಗದಿಂದ ಕೊಠಡಿಯೊಳಗಡೆ ನೀರು ಬರುತ್ತಿರುತ್ತದೆ. ಇದರಿಂದಾಗಿ ಮಳೆಗಾಲದಲ್ಲಿ ಸಾಕಷ್ಟು ತೊಂದರೆಯಾಗಿತ್ತಿರುವುದರಿಂದ Water Proof ಮಾಡಿಸುವ ಅವಶ್ಯಕತೆ ಇದ್ದು, ಮಾನ್ಯ ಕುಲಪತಿಗಳು ದೃಶ್ಯಕಲಾ ವಿದ್ಯಾಲಯಕ್ಕೆ ಭೇಟಿ ಮಾಡಿದಾಗ ತುರ್ತಾಗಿ Water Proof ಮಾಡಿಸುವಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಆದ್ದರಿಂದ ದರಪಟ್ಟಿ ಆಧಾರದ ಮೇಲೆ ಕೆಲಸವನ್ನು ಕೈಗೊಂಡಿದ್ದು ಅದರ ಅಂದಾಜು ಮೊತ್ತ ರೂ.1.15 ಲಕ್ಷಗಳು ಆಗಿದ್ದು ಕೆಲಸ ನಿರ್ವಹಿಸಿದ ಸಂಸ್ಥೆಗೆ ಪಾವತಿ ಮಾಡಲು ದಿನಾಂಕಃ08.05.2026 ರಂದು ಏರ್ಪಡಿಸಿರುವ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಲಾಗಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Waterproofing to Fine Arts College, Principal Terrace. | 1.15 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿಯ ಮೇಲ್ಛಾವಣಿಗೆ ಹೊಸದಾಗಿ Water Proof ನ್ನು ಅಂದಾಜು ಮೊತ್ತ ರೂ.1.15 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೆಲಸವನ್ನು ಕೈಗೊಂಡಿದ್ದು, ಕೆಲಸ ನಿರ್ವಹಿಸಿದ ಸಂಸ್ಥೆಗೆ ನಿಯಮಾನುಸಾರ ರೂ.1.15 ಲಕ್ಷಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 36 | |
|---|---|
| ವಿಷಯ ಸಂಖ್ಯೆ: | ಸಿಂ.06(k)/(05/26) |

## –: ಟಿಪ್ಪಣಿ :–

ವಿಷಯಃ **MCA ಕಟ್ಟಡದ Computer lab ಗೆ 3 Phase ವಿದ್ಯುತ್ ಸೌಲಭ್ಯ ಕಲ್ಪಿಸುವ ಕುರಿತು.**

ಉಲ್ಲೇಖ: Ref. No.:DU/MCA/2026-27/501 ದಿನಾಂಕ:02.05.2026

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹೊಸ ವಿಜ್ಞಾನ ಕಟ್ಟಡದಲ್ಲಿ ನೂತನವಾಗಿ ನಿರ್ಮಾಣವಾಗಿರುವ MCA ಕಟ್ಟಡದಲ್ಲಿರುವ Computer Labಗೆ 3 Phase ವಿದ್ಯುತ್ ಸೌಲಭ್ಯ ಕಲ್ಪಿಸುವಂತೆ ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರು, ಎಂ.ಸಿ.ಎ. ಅಧ್ಯಯನ ವಿಭಾಗ ಇವರು ಕೋರಿದ್ದು, ಇದರ ಅಂದಾಜು ಮೊತ್ತ ರೂ.1.50 ಲಕ್ಷಗಳು ಆಗುತ್ತಿದ್ದು, ದರಪಟ್ಟಿ ಆಧಾರದ ಮೇಲೆ ಕೆಲಸ ಕೈಗೊಳ್ಳಲು ದಿನಾಂಕಃ08.05.2026 ರಂದು ಏರ್ಪಡಿಸಿರುವ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Providing 3-phase electricity facility to the MCA building Computer Laboratory. | 1.50 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ಹೊಸ ವಿಜ್ಞಾನ ಕಟ್ಟಡದಲ್ಲಿ ನೂತನವಾಗಿ ನಿರ್ಮಾಣವಾಗಿರುವ MCA ಕಟ್ಟಡದ Computer Labಗೆ 3 Phase ವಿದ್ಯುತ್ ಸೌಲಭ್ಯವನ್ನು ಅಂದಾಜು ಮೊತ್ತ ರೂ.1.50 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೆಲಸ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 37 | |
|---|---|
| ವಿಷಯ ಸಂಖ್ಯೆ: | ಸಿಂ.06(l)/(05/26) |

## –ಃ ಟಿಪ್ಪಣಿ ಃ–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ ಸಮಾಜ ವಿಜ್ಞಾನ ಕಟ್ಟಡಕ್ಕೆ ಹೊಂದಿಕೊಂಡಂತೆ 4–Inspection Chamber ಗಳು ಮತ್ತು 2–manholeಗಳನ್ನು ನಿರ್ಮಾಣ ಮಾಡುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣಗಳ ಕೇಂದ್ರ (USIC) ಕಾಮಗಾರಿ ನಿರ್ಮಾಣ ಜಾಗದಲ್ಲಿ ಸಮಾಜ ವಿಜ್ಞಾನ ಕಟ್ಟಡಕ್ಕೆ ಹೊಂದಿಕೊಂಡಂತೆ 04 ಸಂಖ್ಯೆ Inspection Chamberಗಳನ್ನು ಮತ್ತು 02 ಸಂಖ್ಯೆಯ Manhole ಗಳನ್ನು ಅಳವಡಿಸುವ ಅವಶ್ಯಕತೆಯಿರುತ್ತದೆ. ಆದ್ದರಿಂದ, ಸದರಿ ಕಾಮಗಾರಿಯನ್ನು ಅಂದಾಜು ಮೊತ್ತ ರೂ.3.00ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:08.05.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಲಾಗಿದೆ.

| Sl. No. | Name of the Work | Amount Rs. (in Lakhs) |
|---|---|---|
| 1. | Construction of 4-Inspection Chambers and 2-manholes adjacent to the Social Science Building at Davangere University, Shivagangotri Campus. | 3.00 |

:: ನಿರ್ಣಯ ::

ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣಗಳ ಕೇಂದ್ರದ (USIC) ಕಾಮಗಾರಿ ನಿರ್ಮಾಣ ಜಾಗದಲ್ಲಿ ಸಮಾಜ ವಿಜ್ಞಾನ ಕಟ್ಟಡಕ್ಕೆ ಹೊಂದಿಕೊಂಡಂತೆ 04 ಸಂಖ್ಯೆ Inspection Chamber ಗಳನ್ನು ಮತ್ತು 02 ಸಂಖ್ಯೆಯ Manhole ಗಳನ್ನು ಅಂದಾಜು ಮೊತ್ತ ರೂ.3.00 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೆಲಸ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 38 | |
|---|---|
| ವಿಷಯ ಸಂಖ್ಯೆ: | ಸಿಂ.06(m)/(05/26) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಂಶೋಧನಾ ಪ್ರಯೋಗಾಲಯಗಳನ್ನು (ಹಂತ–01) ಭೌತಶಾಸ್ತ್ರ ಅಧ್ಯಯನ ವಿಭಾಗ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಭೌತಶಾಸ್ತ್ರ ಅಧ್ಯಯನ ವಿಭಾಗ ಹಾಗೂ ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಸಂಶೋಧನಾ ಪ್ರಯೋಗಾಲಯಗಳ ಅವಶ್ಯಕತೆ ಇದ್ದು, ಹೊಸ ವಿಜ್ಞಾನ ಕಟ್ಟಡದ 2ನೇ ಮಹಡಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಂಶೋಧನಾ ಪ್ರಯೋಗಾಲಯಗಳನ್ನು (ಹಂತ–01) ಭೌತಶಾಸ್ತ್ರ ಅಧ್ಯಯನ ವಿಭಾಗ ಮತ್ತು ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸುವ ಕುರಿತು ದಿನಾಂಕ:08.05.2026ರಂದು ನಡೆಯಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಹೊಸ ವಿಜ್ಞಾನ ಕಟ್ಟಡದ 2ನೇ ಮಹಡಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸಂಶೋಧನಾ ಪ್ರಯೋಗಾಲಯಗಳನ್ನು (ಹಂತ–01) ಪ್ರಥಮ ಆದ್ಯತೆಯ ಮೇರೆಗೆ ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸಿ ನಂತರ ಉಳಿದ ವಿಭಾಗಗಳಿಗೆ ಹಂಚಿಕ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 39 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(05/26) |

## –: ಟಿಪ್ಪಣಿ :–

ವಿಷಯಃ **2025–26ನೇ ಸಾಲಿನ 3ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:31.03.2026

*********

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ 2025–26ನೇ ಆರ್ಥಿಕ ವರ್ಷದ ದಿನಾಂಕ:27.03.2026 ರಂದು ಆನ್‌ಲೈನ್ ಮೂಲಕ ಜರುಗಿದ ಮೂರನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:27.03.2026 ರಂದು ನಡೆದ 2025–26ನೇ ಆರ್ಥಿಕ ವರ್ಷದ ಆನ್‌ಲೈನ್ ಮೂಲಕ ಜರುಗಿದ ಮೂರನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

| ಹಣಕಾಸು ವಿಭಾಗ – 40 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(05/26) |

## -ಃ ಟಿಪ್ಪಣಿ ಃ-

ವಿಷಯಃ **2026–27ನೇ ಸಾಲಿನ ಆಂತರಿಕ ಅಂದಾಜು ಆಯ-ವ್ಯಯಕ್ಕೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.03.2026

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2026–27ನೇ ಆರ್ಥಿಕ ವರ್ಷದ ಆಂತರಿಕ ಆಯ-ವ್ಯಯ ಅಂದಾಜನ್ನು ಸಿದ್ಧಪಡಿಸಲಾಗಿದ್ದು. ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ವಿವರಣೆ:

- ಡಾ. ಪ್ರಶಾಂತ ಎನ್.ಸಿ, ಮಾನ್ಯ ಸಿಂಡಿಕೇಟ್ ಸದಸ್ಯರು, ಇವರು ಮಾತನಾಡಿ – ವಿಜ್ಞಾನ ವಿಭಾಗಗಳಿಗೆ ಕೆಮಿಕಲ್ಸ್‌ಗಳು ಲಭ್ಯವಿಲ್ಲದಿರುವ ಬಗ್ಗೆ ವಿದ್ಯಾರ್ಥಿಗಳು ತಿಳಿಸಿರುವುದರಿಂದ ಸಮಿತಿ ರಚಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

:: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2026–27ನೇ ಆರ್ಥಿಕ ವರ್ಷದ ಆಂತರಿಕ ಆಯ-ವ್ಯಯ ಅಂದಾಜನ್ನು ಕುರಿತು ಸುಧೀರ್ಘವಾಗಿ ಚರ್ಚಿಸಿದ ಬಳಿಕ ಆಯ-ವ್ಯಯ ಅಂದಾಜನ್ನು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಹಣಕಾಸು ವಿಭಾಗ - 41 | |
|---|---|
| ವಿಷಯ ಸಂಖ್ಯೆ: | ಸಿಂ.07(c)/(05/26) |

# -: ಟಿಪ್ಪಣಿ :-

**ವಿಷಯಃ ವಿಳಂಬ ಹೊಂದಾಣಿಕೆಯಾಗಿರುವ ಎ.ಸಿ. ಬಿಲ್ಲುಗಳ ಮೊತ್ತಕ್ಕೆ ದಂಡ ಶುಲ್ಕ ಮೊತ್ತ ಕೈಬಿಡುವುದಕ್ಕೆ ಸಂಬಂಧಿಸಿದಂತೆ ಅನುಮೋದನೆಗಾಗಿ.**

ಉಲ್ಲೇಖ: 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ 32.2

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಂಡಿಕೆ 32.2ರಲ್ಲಿ ಕ್ಕೆ ಸಂಬಂಧಿಸಿದಂತೆ ವಿಳಂಬವಾಗಿ ಹೊಂದಾಣಿಕೆಯಾಗಿರುವ ಬಿಲ್ಲುಗಳ ಮೊತ್ತಕ್ಕೆ ದಂಡ ಶೇ.11 ರಂತೆ ದಂಡ ಶುಲ್ಕ ವಸೂಲಿಗಾಗಿ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

**<u>ವಿವರ ಈ ಕೆಳಕಂಡಂತಿರುತ್ತದೆ.</u>**

| ಕ್ರ. ಸಂ. | ಒಟ್ಟು ಎ.ಸಿ. ಬಿಲ್ಲುಗಳ ಸಂಖ್ಯೆ | ಒಟ್ಟು ಎ.ಸಿ. ಬಿಲ್ಲುಗಳ ಮೊತ್ತ | ಹೊಂದಾಣಿಕೆ ಯಾಗಿರುವ ಎ.ಸಿ. ಬಿಲ್ಲುಗಳ ಸಂಖ್ಯೆ | ಹೊಂದಾಣಿಕೆ ಯಾಗಿರುವ ಎ.ಸಿ. ಬಿಲ್ಲುಗಳ ಮೊತ್ತ | ವಿಳಂಬವಾಗಿ ಸಲ್ಲಿಸಿರುವ ಎ.ಸಿ.ಬಿಲ್ಲುಗಳ ಸಂಖ್ಯೆ | ವಿಳಂಬವಾಗಿ ಸಲ್ಲಿಸಿರುವ ಎ.ಸಿ.ಬಿಲ್ಲುಗಳ ಮೊತ್ತ | ವಿಳಂಬವಾಗಿ ಸಲ್ಲಿಸಿರುವ ಎ.ಸಿ.ಬಿಲ್ಲುಗಳ ಮೊತ್ತಕ್ಕೆ ಶೇ.11 ದಂಡ ಶುಲ್ಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 01 | 86 | 54,10,600/- | 13 | 6,76,100/- | 73 | 47,34,500/- | 4,85,713/- |

ಕಾಲಂ ಕ್ರಮ ಸಂಖ್ಯೆ 06ರಲ್ಲಿನ ಒಟ್ಟು 73 ಎ.ಸಿ. ಬಿಲ್ಲುಗಳಿಗೆ ಕಾಲಂ 07ರಲ್ಲಿ ಹೊಂದಾಣಿಕೆಗಾಗಿ ವಿಳಂಬವಾಗಿ ಸಲ್ಲಿಸಿರುವ ಮೊತ್ತಕ್ಕೆ ಕಾಲಂ 08ರಲ್ಲಿ ಸೂಚಿಸಿರುವಂತೆ ಶೇ.11 ರಷ್ಟು ದಂಡ ಶುಲ್ಕ ರೂ.4,85,713/- ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ತಿಳಿಸಿರುತ್ತಾರೆ.

**<u>ದಂಡ ಶುಲ್ಕ ವಸೂಲಾತಿಯನ್ನು ಕೈಬಿಡುವುದಕ್ಕಾಗಿ ಸಂಬಂಧಿಸಿದಂತೆ ವಿವರಣೆ:</u>**

ಹೊಂದಾಣಿಕೆಗಾಗಿ ವಿಳಂಬವಾಗಿ ಸಲ್ಲಿಸಿದ 73 ಎ.ಸಿ. ಬಿಲ್ಲುಗಳ ಮೊತ್ತಕ್ಕೆ ಶೇ.11ರಷ್ಟು ದಂಡ ಶುಲ್ಕ ಮೊತ್ತ ರೂ.4,85,713/- ಸಂಬಂಧಪಟ್ಟವರಿಂದ ವಸೂಲಾತಿಗೆ ಸಂಬಂಧಿಸಿದಂತೆ, ಕೆಳಕಂಡ ಅಂಶವನ್ನು ಅವಗಾಹನೆ ತರುತ್ತಾ, ವಿಶೇಷ ಸಂದರ್ಭ ಎಂದು ಪರಿಗಣಿಸಿ ಕಾಲವಿಳಂಬ ಮನ್ನಾ ಮಾಡಿ ವಸೂಲಾತಿಯನ್ನು ಕೈಬಿಡುವುದಕ್ಕಾಗಿ ದಿನಾಂಕ:08.05.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗೆ ಮಂಡಿಸಿದೆ.

1. ಪ್ರಾಧ್ಯಾಪಕರು ತಮ್ಮ ವಿಭಾಗಕ್ಕೆ ಸಂಬಂಧಪಟ್ಟ ಪಾಠ, ಪ್ರವಚನ ಹಾಗೂ ಸಂಶೋಧನೆಯೊಂದಿಗೆ ಹೆಚ್ಚುವರಿ ಘಟಕ, ವಿಭಾಗದ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ ಹೊಂದಾಣಿಕೆ ಮಾಡುವುದು ತಡವಾಗಿರುತ್ತದೆ.
2. ಖಾಯಂ ಬೋಧಕೇತರ ಸಿಬ್ಬಂದಿ ಕೊರತೆ ಇರುವುದರಿಂದ ತಡವಾಗಿರುತ್ತದೆ.
3. ಸಾದಿಲ್ವಾರು ವೆಚ್ಚದ ಕೈಪಿಡಿ 1958ರ ನಿಯಮ 36 ರನ್ವಯ ಎ.ಸಿ. ಬಿಲ್ಲಿನಲ್ಲಿ ಹಣ ಸೆಳೆದ ಅಧಿಕಾರಿಗಳು 30 ದಿನಗಳೊಳಗಾಗಿ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಿಗೆ ಎನ್.ಡಿ.ಸಿ. ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ಅರಿವು ಮೂಡಿಸಲು ಕ್ರಮಕೈಗೊಳ್ಳಲಾಗಿದೆ.

**:: ನಿರ್ಣಯ ::**

73 ಎ.ಸಿ. ಬಿಲ್ಲುಗಳಿಗೆ ಕಾಲಂ 07 ರಲ್ಲಿ ಹೊಂದಾಣಿಕೆಗಾಗಿ ವಿಳಂಬವಾಗಿ ಸಲ್ಲಿಸಿರುವ ಮೊತ್ತಕ್ಕೆ ಕಾಲಂ 08ರಲ್ಲಿ ಸೂಚಿಸಿರುವಂತೆ ಶೇ.11 ರಷ್ಟು ದಂಡ ಶುಲ್ಕ ರೂ.4,85,713/- ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡದಂತೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೈಬಿಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 42 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(05/26) |

# –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯ ವ್ಯಾಪ್ತಿಯ ವಿವಿಧ ಕಾಲೇಜುಗಳಿಂದ ಹೆಚ್ಚುವರಿ ಪಾವತಿಯಾಗಿರುವ ಸಂಯೋಜನಾ ಶುಲ್ಕವನ್ನು ಹಿಂಪಾವತಿಸುವ ಬಗ್ಗೆ.**

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕೋಷ್ಟಕದಲ್ಲಿ ಪಟ್ಟಿಮಾಡಿರುವ ಕಾಲೇಜುಗಳು ಸಂಯೋಜನಾ ಶುಲ್ಕ ಪಾವತಿ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿಗದಿತ ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಾವತಿಸುವಂತೆ ಕೋರಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು, 2024–25 ಹಾಗೂ 2025–26ನೇ ಸಾಲಿನ ಅಧಿಕೃತ ಸಂಯೋಜನಾ ಅಧಿಸೂಚನೆ ಹೊರಡಿಸುವ ಸಂಧರ್ಭದಲ್ಲಿ "ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ. ಅಲ್ಲದೇ, ಕಣ್ತಪ್ಪಿನಿಂದ ಒಂದು ಕೋರ್ಸ್‌ಗೆ ಭರಿಸಬೇಕಾದ ಮೊತ್ತವನ್ನು ಮತ್ತೊಂದು ಕೋರ್ಸ್‌ಗೆ ಭರಿಸಿದಲ್ಲಿ ಅಂತಹ ಮೊತ್ತವನ್ನು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ" ಎಂದು ಸೂಚಿಸಲಾಗಿರುತ್ತದೆ.

ಆದರೆ, ಈ ಕೆಳಕಂಡ ಕಾಲೇಜುಗಳ ಪ್ರಾಂಶುಪಾಲರುಗಳು, ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಕೋರ್ಸ್‌ವಾರು ಶುಲ್ಕಗಳನ್ನು ಗಮನಿಸಿದೇ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ಪಾವತಿಸಿರುತ್ತಾರೆ. ಸದರಿ ಹೆಚ್ಚುವರಿ ಪಾವತಿಯಾಗಿರುವ ಮೊತ್ತವನ್ನು ಹಿಂಪಾವತಿಸುವಂತೆ ಕೋರಿ ಮನವಿಗಳು ಸಲ್ಲಿಸಿರುತ್ತಾರೆ.

| SL. No. | NAME OF THE COLLEGE | AFFLIATION TYPE | COURSE WITH INTAKE | APPLICATION DEMAND | COURSE DEMAND | TOTAL DEMAND | PAID | EXCESS | GST 18% | REIMBURSEMENT AMOUT |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| | **2024–25** | | | | | | | | | |
| 1 | ಶ್ರೀ ಡಿ.ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜು, ಹೊನ್ನೂರು ಗೊಲ್ಲರಹಟ್ಟಿ | RTA | BA-90<br>BCOM-30<br>B.Sc-30 | 5000 | 52401 | 57401 | 82584 | 25183 | 3841.47 | 21341.53 |
| 2 | ವೆಂಕಟೇಶ್ವರ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | RTA | BA-480<br>BBA-60<br>BCOM-120<br>BCA-60 | 5000 | 174090 | 179090 | 210089 | 30999 | 4728.66 | 26270.34 |
| 3 | ಎಸ್.ಆರ್.ಎಸ್. ಪದವಿ ಮಹಾವಿದ್ಯಾಲಯ, ಚಿತ್ರದುರ್ಗ | RTA | BBA-60<br>BCOM-120<br>BCA-120 | 5000 | 374546 | 379546 | 408805 | 29259 | 5266.62 | 23992.38 |
| | **2025–26** | | | | | 0 | 0 | 0 | 0 | 0 |
| 1 | ಗಂಗಾ ಪದವಿ ಕಾಲೇಜು, ಹಿರಿಯೂರು | RTA | BCOM-50<br>BCA-50 | 5000 | 125767 | 130767 | 210176 | 79409 | 12113.24 | 67295.76 |
| 2 | ಗಿರೀಶ ಶಿಕ್ಷಣ ಮಹಾವಿದ್ಯಾಲಯ, ಹಿರಿಯೂರು | RTA | BED-100 | 5000 | 206309 | 211309 | 266530 | 55221 | 8423.54 | 46797.46 |
| | | | | | | | **1178184** | **220071** | **34373.53** | **185697.47** |

ಈ ಕುರಿತು ದಿನಾಂಕ:08.05.2026ರಂದು ಜರುಗಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

- ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಪ್ರವೇಶಾತಿ ಸಂದರ್ಭದಲ್ಲಿ ವಾಸವಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ ಇವರು ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಶುಲ್ಕವನ್ನು ಪಾವತಿಸಿದ್ದಲ್ಲಿ ಮರುಪಾವತಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು, 2022–23ನೇ ಸಾಲಿನಲ್ಲಿ ಕೆಲವು ಕಾಲೇಜಿನವರು Online (UUCMS) Offline ಎರಡೂ Mode ಗಳಲ್ಲಿ ಶುಲ್ಕ ಪಾವತಿಸಿದ್ದು, ಹೆಚ್ಚುವರಿಯಾಗಿ ಪಾವತಿಸಿದ ಶುಲ್ಕವನ್ನು ಹಿಂಪಾತಿಸುವಂತೆ ಕೆಲವು ಕಾಲೇಜಿನವರು ಅರ್ಜಿ ಸಲ್ಲಿಸಿರುತ್ತಾರೆ. ಈ ಕುರಿತು ಮಾಹಿತಿಗಾಗಿ ಸರ್ಕಾರಕ್ಕೆ ಪತ್ರಿಸಲಾಗಿರುತ್ತದೆ.

ಮುಂದುವರೆದಿದೆ...

ಕುಲಸಚಿವರು ಕುಲಪತಿಗಳು

ಇದುವರೆವಿಗೂ Online Mode ನಲ್ಲಿ ಶುಲ್ಕ ಪಾವತಿಸಿದ ಮಾಹಿತಿಯನ್ನು ಕಾಲೇಜುವಾರು UUCMS ತಂತ್ರಾಂಶದವರು ನೀಡಿರುವುದಿಲ್ಲ. ಪ್ರಾಂಶುಪಾಲರ ಕೋರಿಕೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುಂಬರುವ ದಿನಗಳಲ್ಲಿ ಹೆಚ್ಚುವರಿ ಶುಲ್ಕಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಮರುಪಾವತಿಸುತ್ತೇವೆ ಎಂಬಂತೆ ಕಾಲೇಜಿನ ಪ್ರಾಂಶುಪಾಲರಿಂದ ರೂ.100/- ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಬರೆಸಿಕೊಂಡು ಶುಲ್ಕ ಮರುಪಾವತಿಗೆ ಕ್ರಮವಹಿಸುವಂತೆ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

:: ನಿರ್ಣಯ ::

ಈ ಮೇಲ್ಕಂಡ ಕಾಲೇಜುಗಳಿಗೆ ಸಂಬಂಧಿಸಿದಂತೆ ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಕೋರ್ಸ್‌ವಾರು ಶುಲ್ಕಗಳನ್ನು ಗಮನಿಸಿದೇ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ಪಾವತಿಸಿರುತ್ತಾರೆ. ಸದರಿ ಹೆಚ್ಚುವರಿ ಪಾವತಿಯಾಗಿರುವ ಒಟ್ಟು ಮೊತ್ತ:1,85,684.47/- ಮೊತ್ತವನ್ನು ಹಿಂಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಪ್ರಸ್ತುತ ಸಾಲಿನಲ್ಲಿ ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಪಾವತಿಸಿದ ಶುಲ್ಕವನ್ನು ವಾಸವಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ ಇವರಿಗೆ ಹಿಂಪಾವತಿಸಲು ಹಾಗೂ 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿ ಮಾಡಿದ ಶುಲ್ಕವನ್ನು ಮರುಪಾವತಿಸುವಂತೆ ಅರ್ಜಿ ಸಲ್ಲಿಸಿದ ಕಾಲೇಜುಗಳಾದ ಡಾನ್ ಬಾಸ್ಕೊ ಕಾಲೇಜು ಹಾಗೂ ಇತರೆ ಕಾಲೇಜುಗಳಿಗೆ ಷರತ್ತುಗಳನ್ನು ವಿಧಿಸಿ ಮರು ಪಾವತಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿದರು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 43 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(05/26) |

## –: ಟಿಪ್ಪಣಿ :–

**ವಿಷಯಃ ಕಲಾ ನಿಕಾಯದ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ 3 ನೇ ವರ್ಷದ ಸ್ನಾತಕ ಪದವಿಯ 5 ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸಭೆಯನ್ನು ಏರ್ಪಡಿಸಿ, ನಿಯಮಾನುಸಾರ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ದಿನಾಂಕ:22.04.2026ರಂದು ಏರ್ಪಡಿಸಲಾದ ಕಲಾ ನಿಕಾಯದ ವಿಷಯ ಸೂಚಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ ಕಲಾ ನಿಕಾಯದ ಪಠ್ಯಕ್ರಮ ಹಾಗೂ ನಡಾವಳಿಗಳ ಕುರಿತು ಚರ್ಚಿಸಿದ ಬಳಿಕ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 44 | |
|---|---|
| ವಿಷಯ ಸಂಖ್ಯೆ: | ಸಿಂ.08(b)/(05/26) |

## –ಃ ಟಿಪ್ಪಣಿ ಃ–

**ವಿಷಯಃ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ 3 ನೇ ವರ್ಷದ ಸ್ನಾತಕ ಪದವಿಯ 5 ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸಭೆಯನ್ನು ಏರ್ಪಡಿಸಿ, ನಿಯಮಾನುಸಾರ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ದಿನಾಂಕ:22.04.2026ರಂದು ಏರ್ಪಡಿಸಲಾದ ವಿಜ್ಞಾನ ನಿಕಾಯದ ಸಭೆಯಲ್ಲಿ ಕ್ರ.ಸಂ. 01 ರಿಂದ 18ರ ವರೆಗಿನ ವಿಷಯ ಸೂಚಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಪಠ್ಯಕ್ರಮ ಹಾಗೂ ನಡಾವಳಿಗಳ ಕುರಿತು ಚರ್ಚಿಸಿದ ಬಳಿಕ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 45 | |
|---|---|
| ವಿಷಯ ಸಂಖ್ಯೆ: | ಸಿಂ.08(c)/(05/26) |

## –: ಟಿಪ್ಪಣಿ :–

**ವಿಷಯಃ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ 3ನೇ ವರ್ಷದ ಸ್ನಾತಕ ಪದವಿಯ 5 ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸಭೆಯನ್ನು ಏರ್ಪಡಿಸಿ, ನಿಯಮಾನುಸಾರ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ದಿನಾಂಕ:22.04.2026ರಂದು ಏರ್ಪಡಿಸಲಾದ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಸಭೆಯಲ್ಲಿ ಕ್ರ.ಸಂ. 01 ಮತ್ತು 2ರ ವರೆಗಿನ ವಿಷಯ ಸೂಚಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ ವಾಣಿಜ್ಯ ಮತ್ತು ಆಡಳಿತ ನಿರ್ವಹಣಾಶಾಸ್ತ್ರ ನಿಕಾಯದ ಪಠ್ಯಕ್ರಮ ಹಾಗೂ ನಡಾವಳಿಗಳ ಕುರಿತು ಚರ್ಚಿಸಿದ ಬಳಿಕ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 46 | |
|---|---|
| ವಿಷಯ ಸಂಖ್ಯೆ: | ಸಿಂ.08(d)/(05/26) |

## --: ಟಿಪ್ಪಣಿ :-

**ವಿಷಯಃ ಶಿಕ್ಷಣ ನಿಕಾಯದ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ 3ನೇ ವರ್ಷದ ಸ್ನಾತಕ ಪದವಿಯ 5 ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಆಯಾ ವಿಷಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಸಭೆಯನ್ನು ಏರ್ಪಡಿಸಿ, ನಿಯಮಾನುಸಾರ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿ ಪಠ್ಯಕ್ರಮಗಳನ್ನು ಹಾಗೂ ನಡಾವಳಿಗಳನ್ನು ದಿನಾಂಕ:22.04.2026ರಂದು ಏರ್ಪಡಿಸಲಾದ ಶಿಕ್ಷಣ ನಿಕಾಯದ ಸಭೆಯಲ್ಲಿ ಕ್ರ.ಸಂ. 01 ರಿಂದ 5ರ ವರೆಗಿನ ವಿಷಯ ಸೂಚಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ದಿನಾಂಕ:08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ ಶಿಕ್ಷಣ ನಿಕಾಯದ ಪಠ್ಯಕ್ರಮ ಹಾಗೂ ನಡಾವಳಿಗಳ ಕುರಿತು ಚರ್ಚಿಸಿದ ಬಳಿಕ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕ್ರೀಡಾ ವಿಭಾಗ – 47 | |
|---|---|
| ವಿಷಯ ಸಂಖ್ಯೆ: | ಸಿಂ.09(a)/(05/26) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ಜರುಗಿದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಪುರುಷ ಮತ್ತು ಮಹಿಳಾ ಖೋ–ಖೋ ಪಂದ್ಯಾವಳಿಗಳಿಗೆ ಭರಿಸಿದ ಖರ್ಚು–ವೆಚ್ಚಗಳನ್ನು ಪಾವತಿಸುವ ಕುರಿತು.**

*********

2025–26ನೇ ಸಾಲಿನ ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟಿಸ್(AIU) ನವದೆಹಲಿ ಇವರ ನಿರ್ದೇಶನದಂತೆ, ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಪುರುಷ ಮತ್ತು ಮಹಿಳಾ ಖೋ–ಖೋ ಪಂದ್ಯಾವಳಿಯು ದಿನಾಂಕ:26.03.2026 ರಿಂದ ದಿನಾಂಕ:04.04.2026ರವರೆಗೆ ನಡೆಸಲಾಗಿರುತ್ತದೆ, ಸದರಿ ಪಂದ್ಯಾವಳಿಯಲ್ಲಿ ವಿವಿಧ ಚಟುವಟಿಕೆಗಳಿಗೆ ಒಟ್ಟು ರೂ.28,99,064=00ಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಸದರಿ ಪಂದ್ಯಾವಳಿಗಳಿಗೆ ವಿಶ್ವವಿದ್ಯಾನಿಲಯದಿಂದ ರೂ.15,00,000=00 ಅನುದಾನ ನೀಡಲು ಈಗಾಗಲೇ ದಿನಾಂಕ:12.03.2026ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ, ಈ ಸಂಬಂಧ ಮುಂಗಡವಾಗಿ ರೂ.10,00,000=00 ಗಳನ್ನು ಪಡೆಯಲಾಗಿರುತ್ತದೆ, ಉಳಿದ ಮೊತ್ತ ರೂ. 5,00,000=00ಗಳನ್ನು ಡಿ.ಸಿ. ಹುಂಡಿಯ ಮೂಲಕ ಸಂಬಂಧಿಸಿದ ಸಂಸ್ಥೆಗಳಿಗೆ ನೇರವಾಗಿ ಪಾವತಿಸಲು ಹಣಕಾಸು ಅಧಿಕಾರಿಗಳ ಕಛೇರಿಗೆ ಬಿಲ್ಲ್ ಸಲ್ಲಿಸಲಾಗಿದೆ.

ಪಂದ್ಯಾವಳಿಗಳಿಂದ ಹಾಗೂ ದಾನಿಗಳಿಂದ ರೂ.10,22,000=00ಗಳು ಸ್ವೀಕೃತಿಯಾಗಿರುತ್ತದೆ ಸದರಿ ಮೊತ್ತವನ್ನು ಈಗಾಗಲೇ ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಗೆ ಜಮೆ ಮಾಡಲಾಗಿದೆ, ಸದರಿ ಮೊತ್ತವನ್ನು ಪಂದ್ಯಾವಳಿಗಳ ಖರ್ಚು–ವೆಚ್ಚಗಳಿಗೆ ಹಣವನ್ನು ಬಳಸಿಕೊಳ್ಳಲಾಗಿದ್ದು ಡಿ.ಸಿ. ಹುಂಡಿಗಳ ಮೂಲಕ ಸಂಬಂಧಿಸಿದ ಸಂಸ್ಥೆಗಳಿಗೆ ನೇರವಾಗಿ ಪಾವತಿಸಿರುವುದಕ್ಕೆ ಅನುಮೋದನೆ ನೀಡಲು ಹಾಗೂ ಸದರಿ ಹೆಚ್ಚುವರಿ ವೆಚ್ಚಗಳ ಮೊತ್ತ ರೂ3,77,064=00ಗಳನ್ನು ಮಂಜೂರು ಮಾಡಲು ದಿನಾಂಕ:08.05.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಪಂದ್ಯಾವಳಿಗಳಿಂದ ಹಾಗೂ ದಾನಿಗಳಿಂದ ಸಂಗ್ರಹವಾದ ಮೊತ್ತ ರೂ.10,22,000=00 ಗಳನ್ನು ಪಂದ್ಯಾವಳಿಗಳ ಖರ್ಚು–ವೆಚ್ಚಗಳಿಗೆ ಬಳಸಿಕೊಳ್ಳಲಾಗಿದ್ದು ಡಿ.ಸಿ. ಹುಂಡಿಗಳ ಮೂಲಕ ಸಂಬಂಧಿಸಿದ ಸಂಸ್ಥೆಯವರಿಗೆ ನೇರವಾಗಿ ಪಾವತಿಸಿರುವುದಕ್ಕೆ ಅನುಮೋದನೆ ಹಾಗೂ ಸದರಿ ಕಾರ್ಯಕ್ರಮಕ್ಕೆ ಖರ್ಚಾದ ಹೆಚ್ಚುವರಿ ವೆಚ್ಚ ರೂ.3,77,064=00 ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಅಭಿವೃದ್ಧಿ ವಿಭಾಗ – 48 | |
|---|---|
| ವಿಷಯ ಸಂಖ್ಯೆ: | ಸಿಂ.10(a)/(05/26) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಿಗೆ 2026ರ ಹೊಸ ವರ್ಷದ ವಾಲ್ ಕ್ಯಾಲೆಂಡರ್ ಹಾಗೂ ಟೇಬಲ್ ಕ್ಯಾಲೆಂಡರ್‌ಗಳನ್ನು ಖರೀದಿಸಿದ ಮೊತ್ತಕ್ಕೆ ಬಿಲ್ಲು ಪಾವತಿ ಮಾಡುವ ಬಗ್ಗೆ.**

*********

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಿಗೆ 2026ರ ಹೊಸ ವರ್ಷದ ವಾಲ್ ಕ್ಯಾಲೆಂಡರ್ ಹಾಗೂ ಟೇಬಲ್ ಕ್ಯಾಲೆಂಡರ್‌ಗಳನ್ನು M/s Shiva Offset Printers and Publishers #Plot No: 530, New R.T.O Road Belagavi-590016 ಇವರಿಂದ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಿರುವ ಮೊತ್ತ ರೂ.4,04,740=00ಗಳನ್ನು M/s Shiva Offset Printers and Publishers #Plot No: 530, New R.T.O Road Belagavi-590016 – ಇವರಿಗೆ ಪಾವತಿಸಲು ದಿನಾಂಕಃ08.05.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಿಗೆ 2026ರ ಹೊಸ ವರ್ಷದ ವಾಲ್ ಕ್ಯಾಲೆಂಡರ್ ಹಾಗೂ ಟೇಬಲ್ ಕ್ಯಾಲೆಂಡರ್‌ಗಳನ್ನು ದರಪಟ್ಟಿಯಲ್ಲಿ ಯಶಸ್ವಿಯಾದ ಸಂಸ್ಥೆ M/s Shiva Offset Printers and Publishers #Plot No: 530, New R.T.O Road Belagavi-590016 ಇವರಿಂದ ಖರೀದಿಸಿರುವ ಬಿಲ್ಲಿನ ಮೊತ್ತ ರೂ.4,04,740=00 ಗಳನ್ನು ಸದರಿಯವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                                                  ಕುಲಪತಿಗಳು

| ಐ.ಕ್ಯೂ.ಎ.ಸಿ. ವಿಭಾಗ – 49 | |
|---|---|
| ವಿಷಯ ಸಂಖ್ಯೆ: | ಸಿಂ.11(a)/(05/26) |

## –: ಟಿಪ್ಪಣಿ :–

ವಿಷಯಃ **ಒಡಂಬಡಿಕೆ (MOU) ಮಾಡಿಕೊಳ್ಳಲು ಅನುಮೋದನೆ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಾವಣಗೆರೆ ವಿಶ್ವವಿದ್ಯಾನಿಲಯದ ಜೊತೆಗೆ ಈ ಕೆಳಕಂಡ ಸಂಸ್ಥೆಯವರು

1. Shri Dharmasthala Manjunatheshwara University, Dharwad, Karnataka
2. Deshpande Skilling, Deshpande Educational Trust (DET)
3. Karnataka Skill Development Corporation, Government of Karnataka (GoK) – Training on Short Term Training (STT) under Pradhana Mantri Kaushal Vikas Yojana 4.0 (PMKVY – CSSM) Component

ಒಡಂಬಡಿಕೆ ಮಾಡಿಕೊಳ್ಳಲು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಈ ಮನವಿ ಪತ್ರಗಳನ್ನು ಒಡಂಬಡಿಕೆ ಸಮಿತಿ ಸಭೆಯಲ್ಲಿ ಚರ್ಚಿಸಿ ಪರಿಶೀಲನೆ ನಡೆಸಿ ವರದಿಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಒಡಂಬಡಿಕೆ ಮಾಡಿಕೊಳ್ಳಲು ಮತ್ತು SPVC (Special Purpose Vehicle) ಖಾತೆ ತೆರೆಯಲು ದಿನಾಂಕ:08.05.2026ರಂದು ನಡೆಯಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು ಈ ಮೇಲ್ಕಂಡ 03 ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳಲು ಹಾಗೂ SPVC (Special Purpose Vehicle) ಖಾತೆ ತೆರೆಯಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪಿ.ಜಿ. ಜಿಮ್ಖಾನ – 50 | |
|---|---|
| ವಿಷಯ ಸಂಖ್ಯೆ: | ಸಿಂ.12(a)/(05/26) |

# –: ಟಿಪ್ಪಣಿ :–

**ವಿಷಯಃ 2025–26ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಕ್ರೀಡಾ ಸ್ಪರ್ಧೆ ಮತ್ತು ಸಮಾರೋಪ ಸಮಾರಂಭವನ್ನು ಆಯೋಜಿಸಲು ಅಂದಾಜು ವೆಚ್ಚಕ್ಕೆ ಮುಂಗಡ ಎ.ಸಿ ಬಿಲ್ಲನ್ನು ಪಡೆಯುವ ಬಗ್ಗೆ.**

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2025–26ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಕ್ರೀಡಾ ಸ್ಪರ್ಧೆಯು ದಿನಾಂಕ:11.05.2026ರಿಂದ ದಿನಾಂಕ:16.05.2026ರವರೆಗೆ ಆಯೋಜಿಸಲಾಗಿದ್ದು ಮತ್ತು ಸಮಾರೋಪ ಸಮಾರಂಭವನ್ನು ದಿನಾಂಕ:26.05.2026ರಂದು ಆಯೋಜಿಸಲು ಅಂದಾಜು ಖರ್ಚು–ವೆಚ್ಚ ರೂ.2,80,000/–(ಎರಡು ಲಕ್ಷದ ಎಂಬತ್ತು ಸಾವಿರ ಮಾತ್ರ)ಗಳನ್ನು ಮುಂಗಡ ಎ.ಸಿ ಬಿಲ್ಲಿನಲ್ಲಿ ಪಡೆದು ನಂತರದಲ್ಲಿ ಎನ್.ಡಿ.ಸಿ ಬಿಲ್ಲುನ್ನು ಸಲ್ಲಿಸಲು ದಿನಾಂಕ:08.05.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2025–26ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಕ್ರೀಡಾ ಸ್ಪರ್ಧೆಯನ್ನು ದಿನಾಂಕ:11.05.2026 ರಿಂದ ದಿನಾಂಕ:16.05.2026 ರ ವರೆಗೆ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲು ಅಂದಾಜು ಖರ್ಚು–ವೆಚ್ಚಗಳಿಗಾಗಿ ರೂ.2,80,000/– ಗಳನ್ನು ಮುಂಗಡವಾಗಿ ಎ.ಸಿ ಬಿಲ್ಲಿನ ಮೂಲಕ ಪಡೆಯಲು ಹಾಗೂ ನಂತರದಲ್ಲಿ ನಿಯಮಾನುಸಾರ ಎನ್.ಡಿ.ಸಿ ಬಿಲ್ಲುನ್ನು ಸಿದ್ಧಪಡಿಸಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

## –ಃ ಟಿಪ್ಪಣಿ ಃ–

**ವಿಷಯ: ಶ್ರೀಮತಿ ಶಾರದಾ ಪಾಟೀಲ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು**

*********

ಶ್ರೀಮತಿ ಶಾರದಾ ಪಾಟೀಲ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳ ವಿಷಯಗಳಿಂದ 177 ಪಿಹೆಚ್.ಡಿ ಸೀಟುಗಳ ಪ್ರವೇಶ ಪರೀಕ್ಷೆಗೆ ಫೆಬ್ರವರಿ ತಿಂಗಳಲ್ಲಿ ಅರ್ಜಿ ಆಹ್ವಾನಿಸಿ, 27 ಮಾರ್ಚ್ ,2026 ರಂದು ಪ್ರವೇಶ ಪರೀಕ್ಷೆ ನಡೆಸಲಾಗಿತ್ತು, ಇದರ ಕೀ ಉತ್ತರಗಳು ಸೋರಿಕೆಯಾಗಿರುವುದು ಹಾಗೂ ನಿಯಮಗಳನ್ನು ಗಾಳಿಗೆ ತೂರಿ ಪ್ರಶ್ನೆಪತ್ರಿಕೆ ರಚಿಸಲಾಗಿದ್ದು ಮತ್ತು ತಮಗೆ ಬೇಕಾದವರಿಗೆ ಸೀಟು ನೀಡುವ ಹುನ್ನಾರ ನಡೆದಿದೆ ಎಂದು ವಿದ್ಯಾರ್ಥಿಗಳಿಂದ ಆರೋಪ ಕೇಳಿಬಂದಿದ್ದು ಮತ್ತು ಮಾಧ್ಯಮದವರು (ವಿವಿಧ ದಿನಪತ್ರಿಕೆಯ ವರದಿಗಾರರು) ನಮ್ಮನ್ನು ಪ್ರಶ್ನಿಸುತ್ತಿದ್ದಾರೆ ಹಾಗಾಗಿ ಸಿಂಡಿಕೇಟ್ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಮರುಪರೀಕ್ಷೆ ನಡೆಸುವುದು ಹಾಗೂ ನೊಂದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವುದು. ತರಾತುರಿಯಲ್ಲಿ ಆಯ್ಕೆಪಟ್ಟಿಯನ್ನು ಪ್ರಕಟಿಸುವಂತಿಲ್ಲ. |
| ನಿರ್ಣಯ | 2025–26ನೇ ಸಾಲಿನ ಪಿಹೆಚ್.ಡಿ. ಪದವಿ ಸಂಶೋಧನಾ ಸ್ಥಾನಗಳ ಭರ್ತಿಗಾಗಿ ಉಲ್ಲೇಖಿತ ಪತ್ರದಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಈ ಸಂಬಂಧವಾಗಿ, ದಿನಾಂಕ:27.03.2026ರಂದು ವಿವಿಧ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗಿದೆ. ದಿನಾಂಕ:27.03.2026ರಂದು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿವಿಧ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಪ್ರಕಟಿಸಿ, ಅಭ್ಯರ್ಥಿಗಳಿಂದ ಆಕ್ಷೇಪಣೆ/ಅಹವಾಲುಗಳನ್ನು ದಿನಾಂಕ:30.03.2026ರವರೆಗೆ ಸಲ್ಲಿಸಲು ತಿಳಿಸಲಾಗಿತ್ತು. ವಿವಿಧ ವಿಭಾಗಗಳ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆ/ ಅಹವಾಲುಗಳನ್ನು ಪರಿಶೀಲಿಸಿ ಪರಿಷ್ಕೃತ ಕೀ ಉತ್ತರಗಳನ್ನು ದಿನಾಂಕ:31.03.2026ರಂದು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ನಂತರ, ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಸಂಬಂಧಿಸಿದ ವಿಭಾಗದ ಮುಖ್ಯಸ್ಥರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.<br>ಇತಿಹಾಸ ಮತ್ತು ಪುರಾತತ್ವ ವಿಭಾಗದ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳು ಸೋರಿಕೆಯಾಗಿರುವ ಬಗ್ಗೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "50 ಪ್ರಶ್ನೆಗಳಿಗೆ ಒಂದೇ ಉತ್ತರ" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟವಾಗಿರುವ ಈ ಮಾಹಿತಿಯು ದಿನಾಂಕ:22.04.2026ರ ದಿನಪತ್ರಿಕೆಗಳಲ್ಲಿ ಪ್ರಸಾರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಶ್ನೆ ಪತ್ರಿಕೆ ತಯಾರಕರಿಗೆ ವಿಶ್ವವಿದ್ಯಾನಿಲಯದಿಂದ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿದೆ.<br>ಇತಿಹಾಸ ಮತ್ತು ಪುರಾತತ್ವ ವಿಭಾಗದ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಪರಿಶೀಲಿಸಿದಾಗ ಅನುಮಾನಸ್ಪದವಾಗಿ ಕಂಡು ಬಂದಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆದೇಶಾನುಸಾರ, ಸದರಿ ವಿಭಾಗದ ಪಿಹೆಚ್.ಡಿ. ಪದವಿಯ ಮರು ಪ್ರವೇಶ ಪರೀಕ್ಷೆಯನ್ನು ದಿನಾಂಕ:28.04.2026ರಂದು ನಡೆಸಲಾಗಿದೆ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಫಲಿತಾಂಶ ಪಟ್ಟಿಯನ್ನು ಸದರಿ ವಿಭಾಗದ ಮುಖ್ಯಸ್ಥರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.<br>ಎಂ.ಬಿ.ಎ. ಮತ್ತು ವಾಣಿಜ್ಯಶಾಸ್ತ್ರ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಮತ್ತು ಅಭ್ಯರ್ಥಿಗಳ ಅಂಕಗಳನ್ನು ಮರು ಪರಿಶೀಲಿಸಿದಾಗ ಯಾವುದೇ ಅನುಮಾನಸ್ಪದಗಳು ಕಂಡು ಬಂದಿರುವುದಿಲ್ಲವೆಂಬ ಮಾಹಿತಿಯನ್ನು ಸಭೆಗೆ ಮಾನ್ಯ ಕುಲಪತಿಗಳ ಸಭೆಗೆ ತಿಳಿಸಿದರು. |

**ಮುಂದುವರೆದಿದೆ...**

ಕುಲಸಚಿವರು

ಕುಲಪತಿಗಳು

| | |
|---|---|
| ವಿಷಯ | ಹಿಂದಿನ ಸಭೆಯಲ್ಲಿ ಸರ್ಕಾರದ ಆದೇಶ ಉಲ್ಲಂಘನೆ ಮಾಡಿ 175 ಹುದ್ದೆಗಳ ಬದಲಾಗಿ 309 ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಂಡಿರುವ ಕುರಿತು ಪ್ರಸ್ತಾಪಿಸಿದ್ದು ಅದಕ್ಕೆ ತಾವು ನೀಡಿದ ಸಮಜಾಯಿಸಿ ತೃಪ್ತಿಕರವಾಗಿಲ್ಲ. ಈ ನಿಟ್ಟಿನಲ್ಲಿ ವಿಸ್ತೃತ ಚರ್ಚೆಯಾಗಬೇಕು. |
| ನಿರ್ಣಯ | ವಿಶ್ವವಿದ್ಯಾನಿಲಯದ ಹೊಸದಾಗಿ ಪ್ರಾರಂಭವಾದಾಗ ಕಡಿಮೆ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು 175 ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ವಿವಿಧ ಆಡಳಿತ ಕಛೇರಿ ವಿಭಾಗಗಳು, 29 ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ 23 ಸಂಶೋಧನಾ ಕೇಂದ್ರಗಳು, 1 ಸ್ನಾತಕೋತ್ತರ ಕೇಂದ್ರ, 3 ಘಟಕ ಕಾಲೇಜುಗಳು ಪ್ರಾರಂಭಗೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ವಿಭಾಗಗಳ ಲಭ್ಯತೆಗನುಗುಣವಾಗಿ ಸರ್ಕಾರದಿಂದ ಖಾಯಂ ಹುದ್ದೆಗಳು ಮಂಜೂರಾಗದಿರುವುದರಿಂದ ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆಯೆಂದು ಮಾನ್ಯ ಕುಲಪತಿಗಳ ಸಭೆಗೆ ತಿಳಿಸಿದರು. |
| ವಿಷಯ | ಡಿಜಿಟಲ್ ಶಿಕ್ಷಣ ವ್ಯವಸ್ಥೆ ಅಳವಡಿಸಿಕೊಳ್ಳಲು, ಅದರ ಕುರಿತು ವಿವರಗಳ ಅಲಭ್ಯತೆಯಿಂದ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ಒಮ್ಮತದಿಂದ ನಿರಾಕರಿಸಲಾಗಿತ್ತು. ಆದರೆ ನಡಾವಳಿಯಲ್ಲಿ ಒಮ್ಮತದ ನಿರ್ಧಾರವಾಗಿದೆ ಎಂದು ನಮೂದಿಸಿರುವುದಲ್ಲದೆ, ಇತರೆ ಅಂಶಗಳ ಕುರಿತಾದ ಚರ್ಚೆಗಳನ್ನು ತಮಗೆ ಬೇಕಾದಂತೆ ತಿರುಚಲಾಗಿ ಸಭೆಯನ್ನು ದಾರಿತಪ್ಪಿಸುವಂತ ಕೆಲಸವಾಗಿದ್ದು, ಪರಿಷ್ಕೃತ ನಡಾವಳಿಗಳನ್ನು ಕಳಿಸಲು ಪತ್ರ ಬರೆದರೂ ಅದಕ್ಕೆ ಯಾವುದೇ ಉತ್ತರವಿಲ್ಲ, ನಾವು ಕೇಳಲಾದ ಪ್ರತಿಯೊಂದು ಮಾಹಿತಿಯನ್ನು ಒದಗಿಸದೆ ಉದಾಸೀನ ತೋರಿಸಲಾಗುತ್ತದೆ ಇದರ ಕುರಿತು ವಿವರವಾದ ಚರ್ಚೆ ಅಗತ್ಯವಾಗಿದೆ. |
| ನಿರ್ಣಯ | ಸದರಿ ವಿಷಯದ ಕುರಿತು ವಿಶ್ವವಿದ್ಯಾನಿಲಯದಿಂದ ಕ್ರಮವಹಿಸಿರುವುದಿಲ್ಲವೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| ವಿಷಯ | ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಕೆಲಸ ಕಾರ್ಯಗಳ ಕುರಿತು ಸಂತ್ರಸ್ತರು ದೂರು ಸಲ್ಲಿಸಿ ಸಿಂಡಿಕೇಟ್‌ಗೆ ಪತ್ರಗಳನ್ನು ಬರೆದಿದ್ದಾರೆ ಇದರ ಕುರಿತು ಚರ್ಚೆ. |
| ನಿರ್ಣಯ | ವಿಶ್ವವಿದ್ಯಾನಿಲಯದ ವಿರುದ್ಧ ಸಂತ್ರಸ್ತರು ತಮಗೆ ದೂರು ಸಲ್ಲಿಸಿರುವ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 52 | |
|---|---|
| ವಿಷಯ ಸಂಖ್ಯೆ: | ಸಿಂ.01(d)/(05/26) |

# –: ಟಿಪ್ಪಣಿ :–

**ವಿಷಯಃ ಡಾ. ಜಿ.ಕೆ. ಪ್ರೇಮ., ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪ್ರಸ್ತಾವನೆ ಕುರಿತು.**

*********

**ಡಾ. ಜಿ.ಕೆ. ಪ್ರೇಮ.,** ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:08.05.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| ವಿಷಯ | **ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಅಕ್ರಮ ಮತ್ತು ಅವ್ಯವಹಾರ ನಡೆದಿದೆ ಎನ್ನಲಾದ ವಿಷಯ ಕುರಿತು ತನಿಖೆ ನಡೆಸಿ ಮರುಪರೀಕ್ಷೆ ನಡೆಸಲು ಸೂಕ್ತ ನಿರ್ಧಾರ ಕೈಗೊಳ್ಳುವುದು.** |
| ನಿರ್ಣಯ | 2025–26ನೇ ಸಾಲಿನ ಪಿಹೆಚ್.ಡಿ. ಪದವಿ ಸಂಶೋಧನಾ ಸ್ಥಾನಗಳ ಭರ್ತಿಗಾಗಿ ಉಲ್ಲೇಖಿತ ಪತ್ರದಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಈ ಸಂಬಂಧವಾಗಿ, ದಿನಾಂಕ:27.03.2026ರಂದು ವಿವಿಧ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗಿದೆ. ದಿನಾಂಕ:27.03.2026ರಂದು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿವಿಧ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಪ್ರಕಟಿಸಿ, ಅಭ್ಯರ್ಥಿಗಳಿಂದ ಆಕ್ಷೇಪಣೆ/ಅಹವಾಲುಗಳನ್ನು ದಿನಾಂಕ:30.03.2026ರವರೆಗೆ ಸಲ್ಲಿಸಲು ತಿಳಿಸಲಾಗಿತ್ತು. ವಿವಿಧ ವಿಭಾಗಗಳ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆ/ ಅಹವಾಲುಗಳನ್ನು ಪರಿಶೀಲಿಸಿ ಪರಿಷ್ಕೃತ ಕೀ ಉತ್ತರಗಳನ್ನು ದಿನಾಂಕ:31.03.2026ರಂದು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ನಂತರ, ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಸಂಬಂಧಿಸಿದ ವಿಭಾಗದ ಮುಖ್ಯಸ್ಥರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.<br>ಇತಿಹಾಸ ಮತ್ತು ಪುರಾತತ್ವ ವಿಭಾಗದ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳು ಸೋರಿಕೆಯಾಗಿರುವ ಬಗ್ಗೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "50 ಪ್ರಶ್ನೆಗಳಿಗೆ ಒಂದೇ ಉತ್ತರ" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟವಾಗಿರುವ ಈ ಮಾಹಿತಿಯು ದಿನಾಂಕ:22.04.2026ರ ದಿನಪತ್ರಿಕೆಗಳಲ್ಲಿ ಪ್ರಸಾರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಶ್ನೆ ಪತ್ರಿಕೆ ತಯಾರಕರಿಗೆ ವಿಶ್ವವಿದ್ಯಾನಿಲಯದಿಂದ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿದೆ.<br>ಇತಿಹಾಸ ಮತ್ತು ಪುರಾತತ್ವ ವಿಭಾಗದ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಪರಿಶೀಲಿಸಿದಾಗ ಅನುಮಾನಸ್ಪದವಾಗಿ ಕಂಡು ಬಂದಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆದೇಶಾನುಸಾರ, ಸದರಿ ವಿಭಾಗದ ಪಿಹೆಚ್.ಡಿ. ಪದವಿಯ ಮರು ಪ್ರವೇಶ ಪರೀಕ್ಷೆಯನ್ನು ದಿನಾಂಕ:28.04.2026ರಂದು ನಡೆಸಲಾಗಿದೆ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಫಲಿತಾಂಶ ಪಟ್ಟಿಯನ್ನು ಸದರಿ ವಿಭಾಗದ ಮುಖ್ಯಸ್ಥರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.<br>ಎಂ.ಬಿ.ಎ. ಮತ್ತು ವಾಣಿಜ್ಯಶಾಸ್ತ್ರ ವಿಭಾಗಗಳ ಪಿಹೆಚ್.ಡಿ. ಪದವಿ ಪ್ರವೇಶ ಪರೀಕ್ಷೆಯ ಕೀ ಉತ್ತರಗಳನ್ನು ಮತ್ತು ಅಭ್ಯರ್ಥಿಗಳ ಅಂಕಗಳನ್ನು ಮರು ಪರಿಶೀಲಿಸಿದಾಗ ಯಾವುದೇ ಅನುಮಾನಸ್ಪದಗಳು ಕಂಡು ಬಂದಿರುವುದಿಲ್ಲವೆಂಬ ಮಾಹಿತಿಯನ್ನು ಸಭೆಗೆ ಮಾನ್ಯ ಕುಲಪತಿಗಳ ಸಭೆಗೆ ತಿಳಿಸಿದರು. |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

| | |
|---|---|
| ವಿಷಯ | **ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪಿ.ಜಿ. ಡಿಪ್ಲಮೊ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಲು ಚರ್ಚಿಸಿ ಸೂಕ್ತ ಕ್ರಮ ವಹಿಸುವುದು.** |
| ನಿರ್ಣಯ | ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದು. |
| ವಿಷಯ | **ವಿವಿಯಲ್ಲಿ ನಡೆದಿದೆ ಮತ್ತು ನಡೆಯುತ್ತಿದೆ ಎನ್ನಲಾದ ಅಕ್ರಮ ಅಥವಾ ಅವ್ಯವಹಾರ ಅಥವಾ ನಿಯಮ ಉಲ್ಲಂಘನೆಗಳ ಕುರಿತು ಬಂದಿರುವ ದೂರುಗಳ ಬಗ್ಗೆ.** |
| ನಿರ್ಣಯ | ವಿಶ್ವವಿದ್ಯಾನಿಲಯದ ವಿರುದ್ಧ ಅಕ್ರಮ ಅಥವಾ ಅವ್ಯವಹಾರ ಅಥವಾ ನಿಯಮ ಉಲ್ಲಂಘನೆಗಳ ಕುರಿತು ತಮಗೆ ದೂರು ಬಂದಿರುವ ಪತ್ರಗಳನ್ನು ಸಲ್ಲಿಸಿದ್ದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. |
| ವಿಷಯ | **ಏಜೆನ್ಸಿ ನೌಕರರ ನೇಮಕಾತಿಯಲ್ಲಿ 129 ರಿಂದ 309 ರವರೆಗೆ ನೌಕರರಿಗೆ ನಿಯೋಜಿಸಿರುವ ಕೆಲಸದ ವಿವರ ಕುರಿತು.** |
| ನಿರ್ಣಯ | ವಿಶ್ವವಿದ್ಯಾನಿಲಯದ ಹೊಸದಾಗಿ ಪ್ರಾರಂಭವಾದಾಗ ಕಡಿಮೆ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು 175 ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ವಿವಿಧ ಆಡಳಿತ ಕಛೇರಿ ವಿಭಾಗಗಳು, 29 ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ 23 ಸಂಶೋಧನಾ ಕೇಂದ್ರಗಳು, 1 ಸ್ನಾತಕೋತ್ತರ ಕೇಂದ್ರ, 3 ಘಟಕ ಕಾಲೇಜುಗಳು ಪ್ರಾರಂಭಗೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ವಿಭಾಗಗಳ ಲಭ್ಯತೆಗನುಗುಣವಾಗಿ ಸರ್ಕಾರದಿಂದ ಖಾಯಂ ಹುದ್ದೆಗಳು ಮಂಜೂರಾಗದಿರುವುದರಿಂದ ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆಯೆಂದು ಮಾನ್ಯ ಕುಲಪತಿಗಳ ಸಭೆಗೆ ತಿಳಿಸಿದರು. |
| ವಿಷಯ | **ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಲ್ಲಿ ಆದ ಡಿಜಿಟಲ್ ಎಜುಕೇಶನ್ ಕುರಿತು ಅತಿಥಿ ಉಪನ್ಯಾಸಕರ ಸಂಬಳ ಗೌರವಧನ ಮತ್ತು ಹುಡುಗ ಹುಡುಗಿಯರ ಹಾಸ್ಟೆಲ್ ಗಳ ದುರಸ್ತಿ ಕುರಿತು.** |
| ನಿರ್ಣಯ | ಸದರಿ ವಿಷಯದ ಕುರಿತು ವಿಶ್ವವಿದ್ಯಾನಿಲಯದಿಂದ ಕ್ರಮವಹಿಸಿರುವುದಿಲ್ಲವೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| ವಿಷಯ | **ಪ್ರೊ. ಗಾಯತ್ರಿ ದೇವರಾಜ ಇವರಿಗೆ ಸಂಬಂಧಿಸಿದಂತೆ.** |
| ನಿರ್ಣಯ | ಪ್ರೊ. ಗಾಯತ್ರಿ ದೇವರಾಜ ಇವರನ್ನು ವಿಭಾಗದ ಅಧ್ಯಕ್ಷನ್ನಾಗಿ ನೇಮಕ ಮಾಡಲಾಗಿದೆ. ಆದರೆ, ಅಧ್ಯಯನ ಮಂಡಳಿ ಸಭೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಿಲ್ಲವೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| ವಿಷಯ | ಚಿತ್ರದುರ್ಗ ಪಿ.ಜಿ. ಸೆಂಟರ್ ಸುಧಾರಣೆ ಕುರಿತು. |
| ನಿರ್ಣಯ | ಮುಂದಿನ ಶೈಕ್ಷಣಿಕ ವರ್ಷದಿಂದ ಸುಧಾರಣೆ ಮಾಡಲು ಕ್ರಮಕೈಗೊಳ್ಳಲಾಗುವೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

ಕುಲಸಚಿವರು

ಕುಲಪತಿಗಳು

## "ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು"

| ಮಾ.ಸ.ನಿ. – 53 | |
|---|---|
| ವಿಷಯ ಸಂಖ್ಯೆ: | ಸಿಂ.02(p)/(05/26) |

### –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಸಂವಿಧಾನದ 371(ಜೆ) ವಿಧಿ ಅಡಿಯಲ್ಲಿನ ಆದೇಶಗಳನ್ನು ಜಾರಿಗೊಳಿಸುವ ಕುರಿತು.**

ಉಲ್ಲೇಖ:
1. The Constitution (Ninety-Eighth Amendment) Act, 2012, New Delhi, the 2nd January, 2013/Pausa 12, 1934 (Saka)
2. ಡಿಪಿಎಆರ್ 43 ಹೆಚ್‌ಕೆಸಿ 2013 ಬೆಂಗಳೂರು, ದಿನಾಂಕ:29.01.2014
3. ಸಿಆಸುಇ 24 ಹೈಕು 2014 ಬೆಂಗಳೂರು ದಿನಾಂಕ:06.04.2016
4. ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಯುಎನ್‌ಇ 2016, ಬೆಂಗಳೂರು ದಿನಾಂಕ:16.09.2016
5. ಸರ್ಕಾರದ ಆದೇಶ ಸಂ:ಇಡಿ 207 ಯುಎನ್‌ಇ 2021 ಬೆಂಗಳೂರು, ದಿನಾಂಕ:03.03.2022
6. ಡಾ. ಶ್ರೀನಿವಾಸ್ ಎನ್.ಟಿ. ಮಾನ್ಯ ಶಾಸಕರು, ಕೂಡ್ಲಿಗಿ ವಿಧಾನಸಭಾ ಕ್ಷೇತ್ರ ವಿಜಯನಗರ (ಜಿ) ಇವರ ಪತ್ರ ಸಂ:ವಿ.ಕ್ಷೇ.ಶಾ/719/2025 ದಿನಾಂಕ:04.10.2025
7. ಶ್ರೀಯುತ ನೇಮಿರಾಜನಾಯ್ಕ, ಮಾನ್ಯ ಶಾಸಕರು, ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವಿಜಯನಗರ(ಜಿ) ಇವರ ಪತ್ರ ಸಂ:ಶಾಸಕರ ಕಛೇರಿ ಸಂ:589/25 ದಿನಾಂಕ:13.10.2025
8. ಶ್ರೀಯುತ ಕೃಷ್ಣ ನಾಯಕ, ಮಾನ್ಯ ಶಾಸಕರು, 88–ಹೂವಿನ ಹಡಗಲಿ, ವಿಧಾನಸಭಾ ಕ್ಷೇತ್ರ, ವಿಜಯನಗರ(ಜಿ) ಇವರ ಪತ್ರ ಸಂ:ಸ.ಕಾ.ವಿ.ಶಿ.ಇ/706/25 ದಿನಾಂಕ:11.10.2025
9. ಶ್ರೀಯುತ ಕೃಷ್ಣ ನಾಯಕ, ಮಾನ್ಯ ಶಾಸಕರು, 88–ಹೂವಿನ ಹಡಗಲಿ, ವಿಧಾನಸಭಾ ಕ್ಷೇತ್ರ, ವಿಜಯನಗರ(ಜಿ) ಇವರ ಪತ್ರ ಸಂ:ಸ.ಮು.ಕಾ/ 707/25 ದಿನಾಂಕ:11.10.2025

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಕ್ರಮ ಸಂಖ್ಯೆ 2(1)(C), ಉಲ್ಲೇಖ (2)ರ ಅಧ್ಯಾಯ– VII ಸಂಕೀರ್ಣ ಕ್ರಮ ಸಂಖ್ಯೆ 9ರನ್ವಯ ಮತ್ತು ಉಲ್ಲೇಖ (3)ರ ಕ್ರಮ ಸಂಖ್ಯೆ 2ರನ್ವಯ, ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಮಂಜೂರಾದ ಬೋಧಕೇತರ ಹುದ್ದೆಗಳನ್ನು ಗ್ರೂಪ್– ಎ, ಬಿ, ಸಿ ಮತ್ತು ಡಿ ಎಂದು ವರ್ಗೀಕರಿಸಿ, ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ರನ್ವಯ ಶೇಕಡಾ 8% ರಂತೆ ರಾಜ್ಯಮಟ್ಟದ ಮೀಸಲಾತಿಯನ್ನು ಸ್ಥಳೀಯ ವೃಂದವೆಂದು ರಚಿಸಿ, ದಿನಾಂಕ:30.06.2016ರೊಳಗೆ ಅಧಿಸೂಚಿಸುವಂತೆ ತಿಳಿಸಲಾಗಿತ್ತು. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಯುಎನ್‌ಇ 2016, ಬೆಂಗಳೂರು ದಿನಾಂಕ:16.09.2016ರನ್ವಯ ಈ ಕೆಳಕಂಡ ಬೋಧಕೇತರ ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸಿ ಭರ್ತಿ ಮಾಡಿಕೊಳ್ಳಲು ಸೂಚಿಸಲಾಗಿರುತ್ತದೆ. ಉಲ್ಲೇಖ (5) ರನ್ವಯ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕೆಲವು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲಾಗಿದೆ.

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಉಪಕುಲಸಚಿವರು | 01 |
| 2 | ಸಹಾಯಕ ಕುಲಸಚಿವರು | 01 |
| 3 | ಅಧೀಕ್ಷಕರು | 01 |
| 4 | ಹಿರಿಯ ಸಹಾಯಕರು | 01 |
| 5 | ಪ್ರಥಮ ದರ್ಜೆ ಸಹಾಯಕರು | 01 |

ಮುಂದುವರೆದು, ಉಳಿದ ಹುದ್ದೆಗಳನ್ನು ಮುಂಬಡ್ತಿಗೆ ಮೀಸಲಿರಿಸಿ ಹೈದ್ರಾಬಾದ್-ಕರ್ನಾಟಕ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಪರಿಗಣಿಸುವಂತೆ ಕೋರಿ ಉಲ್ಲೇಖ (6), (7), (8) ಮತ್ತು (9)ರ ಪತ್ರಗಳಲ್ಲಿ ಕಲ್ಯಾಣ ಕರ್ನಾಟಕ ಕ್ಷೇತ್ರದ ಜನ ಪ್ರತಿನಿಧಿಗಳು ಮನವಿ ಸಲ್ಲಿಸಿರುತ್ತಾರೆ. ಸರ್ಕಾರದ ಆದೇಶದಂತೆ ಎಲ್ಲಾ ರಾಜ್ಯ ಅನುದಾನಿತ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯ ಬೋಧಕೇತರ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಮೀಸಲಾತಿ ಪಾಲಿಸುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಹೊಂದಿದ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಮುಂಬಡ್ತಿಗೆ ಕಾಯ್ದಿರಿಸಿ ಅರ್ಹ ಅಭ್ಯರ್ಥಿಗಳಿಗೆ ಇಲಾಖಾ ಮುಂಬಡ್ತಿ ಸಮಿತಿ ರಚಿಸಿ, ಮುಂಬಡ್ತಿ ನೀಡುವ ಕುರಿತು ದಿನಾಂಕ:08.05.2026ರ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಬೋಧಕೇತರ ಹುದ್ದೆಗಳನ್ನು ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರನ್ವಯ 371 (ಜೆ) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸುವುದು ಕಡ್ಡಾಯವಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ಹುದ್ದೆಗಳಾದ ಉಪಕುಲಸಚಿವರು ಹಾಗೂ ಹಿರಿಯ ಸಹಾಯಕರ ಹುದ್ದೆಗಳನ್ನು ಇದುವರೆಗೂ ಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಯುಎನ್ಇ 2016, ಬೆಂಗಳೂರು ದಿನಾಂಕ:16.09.2016 ರಲ್ಲಿ ನಮೂದಾಗಿರುವ ಹಾಗೂ ಪ್ರಸ್ತುತ ಖಾಲಿ ಇರುವ ಉಪಕುಲಸಚಿವರು-01 ಮತ್ತು ಹಿರಿಯ ಸಹಾಯಕರು-01 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಮುಂಬಡ್ತಿಗೆ ಹುದ್ದೆಗಳನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ನೇರ ನೇಮಕಾತಿ ಮೂಲಕ 371 (ಜೆ) ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಮೀಸಲಾತಿಯಡಿ ಆಯ್ಕೆಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ಮುಂಬರುವ ದಿನಗಳಲ್ಲಿ ಇಲಾಖಾ ಮುಂಬಡ್ತಿ ಸಮಿತಿ ರಚಿಸಿ, ಮುಂಬಡ್ತಿ ನೀಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು